ಚಂಪಕ ರಾಜಿ

ಮಲ್ಲಿಕಾ

ಚಂಪಕ ರಾಜಿ

ಮಲ್ಲಿಕಾ

ಗತಶೋಕಂ ನ ಕುರ್ವೀತ
ಭವಿಷ್ಯಂ ನೈವ ಚಿಂತಯೇತ್।
ವರ್ತಮಾನೇಷು ಕಾರ್ಯೇಷು
ವರ್ತಯಂತಿ ವಿಚಕ್ಷಣಾಃ॥

Champaka Raji in Kannada by 'Mallika'
Published by Lakshmi Prakashana,
170, Langford Road, Bangalore-560 025.

ಪ್ರಥಮ ಮುದ್ರಣ : ೧೯೮೯
ದ್ವಿತೀಯ ಮುದ್ರಣ : ೧೯೯೨

ಬೆಲೆ : ಇಪ್ಪತ್ತು ರೂಪಾಯಿಗಳು

ಮುದ್ರಕರು:

ನ್ಯೂ ಐಡಿಯಾಸ್
ನಂ. 30, 15ನೇ ಮುಖ್ಯ ರಸ್ತೆ,
ಮೂರನೆಯ ವಿಭಾಗ, ಜಯನಗರ
ಬೆಂಗಳೂರು–560 011

॥ ರಾಧಾರಮಣಪಾದಾರ್ಪಣಮಸ್ತು ॥

ಚಂಪಕ ರಾಜಿ

ಮಲ್ಲಿಕಾ

ಲಕ್ಷ್ಮೀ ಪ್ರಕಾಶನ
170, ಲ್ಯಾಂಗ್ ಫೋರ್ಡ್ ರೋಡ್
ಬೆಂಗಳೂರು–560 025

ಪರಿವಿಡಿ

ಕನ್ಯಾಕುಮಾರಿಯಲ್ಲಿ ಸ್ವಾಮಿ ವಿವೇಕಾನಂದ

ಉತ್ತಿಷ್ಠತ ಜಾಗ್ರತ ಪ್ರಾಪ್ಯವರಾನ್ ನಿಬೋಧತ

ಪರಬ್ರಹ್ಮ ಸಿರಿಮಾನಸ ಮಂಡಲ ಸುಜ್ಞಾನ
ಸಂಭವೆ, ವರ ಕಲ್ಯಾಣಿ, ವಿಜ್ಞಾನ ದಾಯಕಿ,
ಲೋಕ ಪಾವನಿ ಮಧುರ ದಿವ್ಯ ವೀಣಾಪಾಣಿ,
ಪರಮ ಕಾವ್ಯಾನಂದ ಕಾಮಿನಿ, ಕರುಣಾಮಯಿ,
ನಿನ್ನ ಚರಣದಾಸಿಯ ನಿಜ ಬಯಕೆಯನು ಸಲಿಸಿ
ಚಿರ ವೈದ್ಯುತ ಚೇತನವ ಕರುಣಿಸಿ ದಯದಿಂದ
ಉದ್ಧರಿಸೆಮ ಸಾಹಿತ್ಯ ಕಲಾ ಕೋಗಿಲೆಯನು.
ನಿನ್ನ ದಿವ್ಯಾಶೀರ್ವಾದದಿಂದಲಿ ಸ್ವಚ್ಛಂದ
ಮಾನಸೀಯ ಚಿಂತನ ಧಾರೆಯುಕ್ಕಿ ಹರಿಯಲಿ,
ನಾಡಿನಾದ್ಯಂತ ನಡೆವ ಸ್ವರ ಸಂಮೇಲನದಿ
ಸ್ವತಂತ್ರ ಭಾವ ಖನಿ ಉಕ್ಕಲಿ ಸರ್ವತ್ರ ಸದಾ.

ಹೇ ತಾಯೆ, ಅಜಜಾಯೆ, ಲೋಕಪಾವನಿ, ಸುಜನ
ಮನ ಮೋದಿನಿ, ಆನಂದ ಪ್ರದಾಯಕಿ ದೇವಿ
ಜಗನ್ಮೋಹಿನಿ ಸಕಲ ವಿದ್ಯಾಧಿದೇವತೆಯೆ,
ಮಧುರ ಭಾವ ಚಿಂತಾಸ್ಫೂರ್ತಿಯೆ, ಭುವನ ಸತ್ಯ
ಸಾಹಿತ್ಯ ವರದೆ, ಓ ಕಲ್ಪನಾ ಸುಂದರಿಯೆ,
ನಿನ್ನ ಕಾರುಣ್ಯಪೂರ್ಣ ಮಹಿಮೆಯೊಳ್ ವ್ಯಾಧಂ
ಋಷಿಯೈಸಿ ಮೇಣ್ ಪ್ರಪ್ರಥಮ ಕವಿಯೆನಿಸಿದಂ.
ತಾಯೆ, ನೀಯೆನ್ನ ಶಿರಮುಡಿಗೆತ್ತು ಕುಣಿದು ಧಿಮಿ
ಧಿಮಿ ತುಳಿದು ಚಂದದಿ ನರ್ತಿಸು ದಯೆದೋರಿ. ನೀ
ತುಳಿಯೆ ದಳದಳ ಅರಳ್ವುದೆನ್ನಯ ಚಿತ್ತಕಲ್ಪ.

→

ಹೇ ವಾಣಿ, ಜಗತ್ತಾರಿಣಿ, ಪರಮ ಕಲ್ಯಾಣಿ
ಕಾಲ್ವಿಡಿದು ಪ್ರಾರ್ಥಿಸುವೆ ಎನ್ನೆದೆಯ ಕೋಶಕ್ಕೆ
ನಿನ್ನಯ ದಯಾರ್ಮ್ಮೆದುರ ರಸಧಾರೆ ಹರಿದೊಡೆ
ಸಾಲ್ಗುಂ. ದಿನದಿನಂ ಬರಲುರೆ ಹನಿ ಹನಿಯ್ಯೈಸಿ,
ಈ ಜಡ ಬದುಕು ಸಾರ್ಥಕಮಪ್ಪುದೈ ಲೋಕದೊಳ್
ತಾಯೆ, ಕರುಣಿಸಿ ಮಾನಿಸಿ ದಯೆದೋರೆನಗೆ
ಮೊಲ್ಲೆ ಬನದ ಕಿರು ಮಲ್ಲಿಕಾ ಪೂ ಪರಿಮಳಿಸುವೊಲ್

ಓ, ಕನ್ಯಾಕುಮಾರಿ ! ತವ ಸುರುಚಿರ ನಾಮವೇ
ಪೇಳ್ವುದೈ ನವನವೋನ್ಮೇಷಶಾಲೀನತೆಯ
ಸುರ ಸುಂದರ ಬಂಧುರಂ! ಅಃ, ಭಾರತವರ್ಷದ
ಪರಮ ಪವಿತ್ರ ಪದಾಂಬೋಜಗಳ ತುತ್ತ ತುದಿಯ
ದೃಶ್ಯಮಾನ ಸೌಂದರ್ಯನಿಧಿ ! ಓ, ಏನೆಂಬೆ
ಲೋಕದೊಳ್ ಅತ್ಯಪೂರ್ವತರ ಮಹಾ ಸಾಗರ
ತ್ರಯಂಗಳ ಹೃದಯಂಗಮ ಸಂಗಮ ದಾಣಂ !
ವಾರ್ಧಿತ್ರಯಗಳ್ ಪರಮಾನಂದ ಮೋದದಿಂ
ಧುಮುಧುಮಿಸುತ ಘೋರನೆ ಘೋರ್ಗರೆದು ಅಲೆಯೇರಿ
ಅಲೆಯಿಳಿದು ಮುನ್ನುಗ್ಗುವ ಸ್ಪರ್ಧಾ ಖೇಲನಂ
ಸಾಮಾನ್ಯಮಲ್ತು ; ರಸಸ್ಫೂರ್ತಿಗೆ ದಿವ್ಯಾಗರಂ !
ಆವಾವ ರಾಜ್ಯಕೋಶಂಗಳಂ ಸುಳಿಸುತ್ತಿ
ಭೂಮಿಯಂ ಕೊರೆಕೊರೆದು ಪ್ರಾಣ–ಮನೆ–ಮಠಗಳಂ
ನುಂಗಿ ಸ್ವಾಹಂಗೈದು ಹಳಹಳಿಸಿ ರೋಷದಿಂ
ತರಂಗ ತರಂಗದೊಳ್ ಮೇಲಾಯ್ದು ಬಹ ಮಹಾ
ವಾರ್ಧಿಗಳ ಸಂಗರದ ವೀಕ್ಷಣಾ ಸುಕ್ಷೇತ್ರಂ !
ತಟೆಯಂಚಲಿ ಮದ್ದಾನೆಗಳ ಹಿರಿದಂಡಿನೊಲ್
ಒರಗಿರ್ಪ ಹೆಬ್ಬಂಡೆಗಳಂ ರಪ್‌ರಪ್ಪನೆನೆ

→

ಅಪ್ಪಳಿಸಿ ಮುದ್ದಿಡುತ ಲವಣರಾಶಿಯೊತ್ತುವ
ಮಹಾವಾರ್ಧಿತ್ರಯಗಳ ಪವಿತ್ರ ಜಲ ಹೇರಾಶಿ !

ಭಾರತ ಜನನಿಯ ಪದತಲದೊಳ್ ನೆಲೆನಿಂದ
ದೇವಿಕನ್ಯಾಕುಮಾರಿಯ ಸುಂದರ ದೇಗುಲ ;
ಗರ್ಭಗುಡಿಯಲಿ ಸುಪ್ರತಿಷ್ಠಿತ ಸುಸುಂದರಮಾ
ಕಗ್ಗಲ್ಲಿನ ಕನ್ಯಾ ಕುಮಾರಿಯ ಮೂರ್ತಿ ಶ್ರೀ !
ನಿತ್ಯ ಭಕ್ತಜನ ಪರಿಪೂಜಿತ ನಯನ ಬಂಧುರೆ !
ನಕ್ಷತ್ರ ಸದೃಶ ವಜ್ರ ಖಚಿತ ಮುಕರ ಶೋಭಿನಿ !
ಪರಮ ಭಾಗ್ಯವತಿ ; ಮಂಗಳಾಂಗಿ ನಮೋ ನಮೋ!

ಪ್ರಾತಃಸಮಯದ ತನಿವೊಳ್ತು, ಮುಂಬೆಳಕು ಇನಿ
ದಿನಿದಾಗಿ ತುಳುಕುತಿರೆ ಪೂರ್ವೀ ದಿಕ್ತಟದಲಿ !
ಪಕ್ಷಿ ಸಂಕುಲಂ ಸವಿಗೊರಳ ಸುಪ್ರಭಾತಂ
ಪೊಣ್ಮಿಸಿದುದು ರಾಗಾನುರಾಗದಲಿ. ದೇವೀ
ಪೂಜೆಯೊಳ್ ಮಂಗಳರವವೊ ಎನಲ್ !
ಆಗಳಾ
ದೇಗುಲದಲಿ ಪೂಜಾರಿಗಳ ಮಂತ್ರಘೋಷಂ
ಮೊಳಗುತಿರೆ ಭಕ್ತ ಜನ ಸಂದೋಹ ಮುಳುಗಿತ್ತು
ಧ್ಯಾನ ಮಗ್ನತೆಯಲ್ಲಿ ಭಕ್ತಿರಸ ಪಾನದಿಂ
ಪ್ರಮತ್ತಮಾದೊಲ್ ವನರಾಜಿಯಮಧುಮತ್ತ
ಭ್ರಮರಂ ಮಿಾರ್ದು ! ಆನೆವಾಗಿಲ ಗಂಟೆಯುಂ
ಢಣ್ ಢಣಾರನೆ ಭಾಜಿಸಿ ಗಂಭೀರ ಗತಿಯಲಿ
ತರುಣನೋರ್ವಂ ಗರ್ಭಗುಡಿಗೈತರುತಿರಲಾ
ಗಂಟಾರವಂ ಮೊಳಗುತಿರ್ದುದು ಮತ್ತೆ ಮತ್ತೆ.
ಮಹದ್ ವ್ಯಕ್ತಿಯ ಆಗಮನಮಂ ನಿರೂಪಿಸಲೊ

→

ಎನಲ್ ! ನೋಡೆ, ಅಪೂರ್ವ ತೇಜಃಪುಂಜಮೂರ್ತಿ
ಉಲ್ಕೆಗಳವೋಲ್ ಬೆಳಗುವ ನಯನ ದ್ವಯಗಳ್.
ಅಜಾನುಬಾಹು. ಕಾವೀಧಾರಿ !
ಅಲ್ಲಿರ್ದ
ಪೂಜಾರಿಗಳ್ ಮೇಣ್ ಭಕ್ತ ಜನರ್ ಕಣ್ವೆ
ಮಿಟುಕಿಸದೆ ನೋಡಿದರ್ "ಆರಿವಂ ? ಆರಿವಂ ?"
ಆ ತರುಣ ಸಂನ್ಯಾಸಿ ದೇಗುಲದ ಪ್ರದಕ್ಷಿಣೆ
ಗೈದು ನೇಮದಿಂದಲಿ ಗರ್ಭಗುಡಿಗೆತ್ತು ವರ
ಭಕ್ತಿ ಭಾವದಿಂ ದೇವಿಗೆ ಕರಗಳ್ ಜೋಡಿಸಿ
ಉದ್ದಂಡ ಪ್ರಣಾಮಂಗೈದಂ ಅಗ್ನಿಮೂರ್ತಿಯೆ
ಮೈಬಾಗಿದವೊಲ್ ! ಆಶ್ಚರ್ಯಚಕಿತ ಜನರಾಶಿ
ನಿಟ್ಟಿಸಿತು ವ್ಯಕ್ತಿಯಂ ನಿಜ ಭಕ್ತಿ ಭಾವದಿಂ.

ತರುಣ ಸಂನ್ಯಾಸಿ ಗರ್ಭಗುಡಿಯಿಂ ಪೊರಬೀಳ್ವ
ಮುನ್ನ ಗಂಟೆಯಂ ಬಾಜಿಸಿದಂ ಮತ್ತೆ ಮತ್ತೆ ಢಣ್
ಢಣಾರ್ ! ಢಣ್ ! ಢಣಾರ್ !
ಆಗಳೋರ್ವ ಭಕ್ತಂ
ಗೌರವ ಭಾವದಿಂ ಕರಗಳ್ ಜೋಡಿಸಿ ಕೇಳ್ದಂ
"ತಮ್ಮ ಅಭಿದಾನವೇನೆಂಬುದಂ ದಯೆಗೈದು
ಬೆಸಸಿಂ ಗುರುವೇ !" ಅದಕಾ ತರುಣ ನಸುನಕ್ಕು
ಬಿತ್ತರಿಸಿದಂ "ಆಂ ಗುರು ಮಹಾರಾಜರ ಶಿಷ್ಯ,
ಭಾರತಕುಮಾರ,"
ಪೆಸರಂ ಮರಿಯೆ ಕೈಮುಗಿದು
ಸಕ್ಕರೆಯೊಸರುವ ದನಿಯೊಳೆಂದಂ "ಒಳ್ಳಿತ್ತೈ,
ಗುರುವರ್ಯ ! ತವಮಾರ್ಗ ದರ್ಶನದಗತ್ಯಮಂ
ಎಲ್ಲರರಿತು ಬಾಳ್ದೊಡೆ ಜೀವನೀ ಶಾಂತಿ ಕಣ !

→

ಪ್ರಜ್ಞಾನದಾರಿದ್ರ್ಯದಿಂ ನರಳುತಿರ್ಪುದೀ
ವೇದಭೂಮಿ, ನಿಮ್ಮವೊಲ್ ಸುಜ್ಞಾನನೇತ್ರರೇ
ಗತಿಯಕ್ಕು, ನೀಂ ಕೀರ್ತಿ ಶಾಲಿಯಾಗೈ ಭಾರತ
ಪುತ್ರನೇ !"

ತರುಣ ಸಂನ್ಯಾಸಿಯುಂ ಪರಕೆಯಂ
ಸ್ವೀಕರಿಸಿದೊಲ್ ಮಂದಸ್ಮಿತನಾಗಿ ಕೈಮುಗಿದು
ನಲ್ಮೆಯಿಂ ಬೀಳ್ಕೊಂಡು ನಸುದೂರದ ಸಮುದ್ರ
ತೀರಕೈತಂದಂ . ಕಣ್ಮನಗಳ್ ಒರ್ಮೆಗೇ
ಮಲೆತು ಮತ್ತಾಗುವವೊಲ್ ಪರ್ವಿದ ಪರಿದೃಶ್ಯ
ಮಾನ ಸೌಂದರ್ಯರಾಶಿಯಂ ನೋನೋಡುತಿರೆ
ಒಡಲೊಳ್ ಸುಖದುಃಖ ರಸ ದ್ರವಿಸಿ ನೀರಾಗಿ
ಹರಿದುದು ಕಣ್ ತೊಯ್ಯುವವೊಲ್ ! ಅಹಾ ಏಂ ಭವ್ಯ
ಭಾರತವರ್ಷ ! ಪರರಾಳ್ವಿಕೆಯಿಂ ಕಡು ಸಂಕಟ–
ದಾರಿದ್ರ್ಯಗಳ ಇಕ್ಕಳದಲಿ ಸಿಲ್ಕಿ ನರಳ್ವ
ರಣಗೋಳು ! ಆ ನೆನವರಿಕೆಯಿಂದೆ ತನುಮನಂ
ನೊಂದು ನೀರಾದುದು ಬಿಸಿಲಟ್ಟಿದ ಮಂಜಿನೊಲ್ !

ಆಗಳಾ ಧೀರ ಯೋಗಿ ಎರ್ದೆಯಮೇಲೆ ಕೈ
ಕಟ್ಟಿ ಭಾವೋದ್ವೇಗದಿಂ ನುಡಿದಂ "ಈಗಳ್
ಎನ್ನ ಆತ್ಮೋದ್ಧಾರಕಿಂ ಈ ದೇಶೋದ್ಧಾರ
ಪಿರಿದು. ಒಡಲ ಪಸಿವೆಯಲಿ ನರಳ್ವ ಬಡಜನಕೆ
ತತ್ತ್ವಬೋಧೆ ? ಛಿಃ ! ನಾಚಿಗೆಗೇಡು ! ಪ್ರಪ್ರಥಮ
ಚಿಕಿತ್ಸೆಯೇ ಅನ್ನ–ವಸನ–ವಸತಿ ಮೇಣಕ್ಷರ
ಜ್ಞಾನದನುಪಾನದ ಬಳಿಕ ಮುಂದಿನ ವಿಚಾರ
ವಿಹಾರಂ." ಎನುತೆನ್ನೊಳ್ ಗಂಭೀರ ಭಾವದಿಂ
ಹಿಂತಿರುಗಿ ಭಾರತ ಭುವಿಯಂ ಕಣ್ ತಣಿವವೊಲ್

→

ನೋಡಿದಂ, ಸಿಂಹರಾಜ ಕೊರಳ್ ನೆಗಹಿ ನೋಳ್ಪ
ತೆರಂ. ಆಗಳ್ ಭವ್ಯ ನೋಟಕೆ ಕಂಡದ್ದೇಂ ?
ಕಠಿಣ ಲೌವ ಶೃಂಖಲೆಯಾದ ವೇದಜನನಿಯ
ವಿಕೃತರೂಪ ! ಒಡನೆಯೆ ತನ್ನೊಳಿಂತೆಂದಂ,
"ಹಾ ! ವೇದಮಾತೆಯ ಗೌರವಾದರಗಳನುಳಿಸಿ
ತೊಳಗಿ ಬೆಳಗಿದಲ್ಲದೆ ಜೀವನ ಗೌರವ–ಆತ್ಮ
ಗೌರವಗಳ್ ಅಲಭ್ಯಂ ! ದೂರದ ಪಾಶ್ಚಿಮಾತ್ಯ
ರಾಷ್ಟ್ರಗಳಿಗುಯ್ದು ವೇದ ಜನನಿಯ ಭವ್ಯತೆಯ–
ನೆತ್ತಿ ಹಿಡಿಯುವೆ ಲೋಕ ಬೆಕ್ಕಸಂಬಡುವನ್ನ.
ಪಶ್ಚಿಮ ದೇಶಗಳ್ ಬೆಚ್ಚಿ ಬೆರಗಾಗುವನ್ನ.
ಮೇಣ್ ಭಾರತ ಮಾತೆಯು ಸಂತಸ ಪಡುವನ್ನ."
ಎರ್ದೆಯಾಳದಿಂ ಪೊಣ್ಮಿದುದು ಧೀರ ಕೇಸರಿ
ವಾಣಿ ! ಎಲ್ಲೋ ಉದ್ಭವಿತ ಸೆಳೆಮಿಂಚು ತೆಕ್ಕನೆ
ಬಂದು ಕಂಗಳಂ ಆವರಿಸಿದೊಲ್ ಕಣ್ ಜ್ಯೋತಿ
ಫಳಫಳನೆ ಮಿಂಚಿ ಮಾಪೊರ್ಳೆದುದು. ಆಚಣಂ,
ಮಹಾವಾರ್ಧಿಗೆ ಧುಮುಕಿದ ವೀರ ಮುನಿವರ್ಯಂ
ಧೂರ್ತ ಅಲೆಗಳಲಿ ಮುನ್ನುಗ್ಗಿ ಈಸಿ ಸಾರ್ದು ನಸು
ದೂರದಲಿರ್ದ ಹೆಬ್ಬಂಡೆಯನೇರಿ ಸುತ್ತಲೂ
ಉಜ್ವಲ ದೃಷ್ಟಿಯಂ ಬೀರಿದಂ, ತಾಂ ಕಿಶೋರ
ಕೇಸರಿಯೊಲ್ ! ಅಹ, ಸುಂದರ ಜಗ ; ಸುರಸುಂದರ
ದಿನ ; ಮುಂಗಡೆಯಲಿ ಮಹಾ ವಾರ್ಧಿ ! ಪಿಂಗಡೆಯಲಿ
ವೇದ ಭೂಮಿ ಭಾರತ ವರ್ಷ ! ಆ ದಿಟ್ಟಿಯೊಳ್
ತುಂಬಿದ ಅಪೂರ್ವ ದೃಶ್ಯಮಾನ ವೈಭವದಿಂ
ಮೈಮನಂ ಪುಳಕಗೊಳೆ ಧೀಮಂತ ಬೈರಾಗಿ
ದಿವ್ಯ ಭಾವೋದ್ವೇಗದಿಂ ನುಡಿದಂ "ಪ್ರಸ್ತುತ,
ಮಾತೃಭೂಮಿಯ ಸೇವೆಗಾಗಿ ದೂರ ಪಶ್ಚಿಮ

→

ದೇಶಂಗೆತ್ತು ದ್ರವ್ಯಾರ್ಜನೆಗೈದು ಆಪನಿತು
ಮಾತೃಭೂಮಿಯ ಸೇವೆಗೈವೆ ! ಪರಮ ಸೇವೆಗೈವೆ !
ಆಗಳಾ ಮಹಾವಾರ್ಧಿತ್ರಯಂಗಳ ಮಧ್ಯೆ
ಕೇಳಿತೊಂದು ಅಶರೀರವಾಣಿ "ಎಲೆ, ಮಗುವೇ !
ನಿನ್ನ ಮನದಾಕಾಂಕ್ಷೆ ಈಡೇರಲಿ, ತೆರಳ್ಳೈ
ಪಾಶ್ಚಾತ್ಯ ರಾಷ್ಟ್ರಗಳಿಗೆ ; ವೇದಾಂತಿ ಕೇಸರಿಯ
ಪಾಂಗಿನಿಂ ಜೈತ್ರಯಾತ್ರೆಗೈ ! ಸರ್ವಂ ಶುಭಂ !"
ತರುಣ ಸನ್ಯಾಸಿ ಆನಂದ ಪುಳಕಿತನಪ್ಪಿ
ಆಶ್ಚರ್ಯವಿಸ್ತೃತನಯನಗಳಿಂ ನಿಟ್ಟಿಸಿದಂ !
ಸಮುದ್ರ ದೇವಿಯರಲಿ ಆರ್ ಇಂತು ನುಡಿದರ್ ?
ಓ, ಎಮ್ಮ Bay of Bengal ದೇವತೆಯೆ ।
ಅಥ Indian Ocean ದೇವತೆಯು ಹರಸಿದಳೆ ?
ಯಾ Arabian Sea ದೇವತೆ ಮನತುಂಬಿ
ಪರಸಿದಳೆ, ಆರಿರ್ಕುಂ ? ಹಾ....ಈಗಳಾಂ ಅರಿತೆಂ.
ಮೂವಾತೆಯರ್ ಗೂಡಿ ಹರಸಿರ್ಪರೆನ್ನ ಇಂ
ಧನ್ಯನಪ್ಪಂತೆವೊಲ್. ತಾಯೆ ! ನಿಮಗೆ ನಮನಂ
ಎನುತೆ ತಲೆಬಾಗಿ ನಮಿಸಿದಂ ಭಕ್ತಿ ಭಾವದಿಂ. (ಆಧಾರಿತ)

— o —

ಸ್ವರ್ಗದ ನಿರೂಪ

ಆಃ ! ಎಂತಪ್ಪ ಪಾದ ಸಪ್ಪಳ ?
ಪಟಪಟ ನೊಳಗುತಿಹ
ಪಾದ ಸಪ್ಪಳ ಆಲಿಸು ಮನವೆ !
ಸ್ವರ್ಗದ ನಿರೂಪದೊಡನೆ
ನಡೆಯುತಿದೆ ನಿಚ್ಚನಡೆಯ
ರಂಗದಮೇಲೆ ರಿಂಗಣಿಸುತ !
I can hear, hear !

— o —

ಪುಷ್ಪವಾರಾಶಿ

ಓವ್ಹೋ, ನೋಡಾ ವಸಂತ ಪ್ರಭುವಿನ
ರಂಗುರಂಗಿನ ಮಹಾ ಒಡ್ಡೋಲಗಂ !
ಗಿಡುತರು ಬಳ್ಳಿಗಳ
ಪಲ್ಲವ ಪಾಣಿಗಳಲಿ ಸುರಸುಂದರ ಕುಸುಮಗಳ
ವೈಭವೋಪೇತ ಸಿಂಗಾರ ಬಂಧುರಂ !
ಎಲ್ಲೆಲ್ಲಿಯುಂ ಪೂವಿಡಿ ಮೊಗ್ಗುಗಳ್
ಮೈತುಂಬಿ ದಳದಳ ಅರಳಿ
ಪರಮ ಸೌಗಂಧಮಂ ಪ್ರಸರಿಸುತಿರೆ ತಾವಾಗಿ
ಏಂ ಸೊಗವೊ ಜಗತ್ ಪ್ರಣಾಳಿಕೆಗೆ !
ವಿವಿಧ ರೂಪಿನ ವಿವಿಧ ವರ್ಣದ
ವಿವಿಧ ವರ್ಗದ ವಿವಿಧ ಪುಷ್ಪವಾರಾಶಿ !
ಆವಾವ ಪರಮ ವಸ್ತುವಿನಿಂ
ನಿನ್ನವತರಣವೋ ಪೇಳ್, ಪುಷ್ಪವೇಶಿ !
ಎನಿತು ಜಾನಿಸಿದೊಡಂ ಪರಿಭಾವಿಸಿದೊಡಂ
ಅರಿಯದಾದೆ ನಿನ್ನ ಜನ್ಮ ಮೂಲವಂ.
ನಿತ್ಯ ಸೃಜನಶೀಲ ಶಾಂತಿ–ಕಾಂತಿ
ಸತ್ಯ–ಧರ್ಮ ಪರಮವೇಶಿ ?
ವಿಶ್ವಶಾಂತಿ ಸತ್ಯರೂಪಿ !
ನೀ ಬೆಳಗುವೆ ಕಾಲದೇಶಗಳ ಎಲ್ಲೆ ಮೀರಿ
ಬ್ರಹ್ಮ ಸೃಷ್ಟಿಯ ಸುರಮ್ಯರೂಪೆ
ಜಗತ್ ಸೌಂದರ್ಯ ಸೃಷ್ಟಿಗೆ ನೀನೆ ಆಧಾರ !
ನೀನೇ ಶೀತಲ ಶಾಂತಿಗೆ ಸರ್ವಾಧಾರ !

→

ವಸಂತ ಪ್ರಭುವಿನ ಕೀರ್ತಿಯ
ಕಿರೀಟವೇ ಸುರಸುಂದರ ಪುಷ್ಪಾಳಿ !
ಕವಿಗಳ ಶೃಂಗ ಸಭೆಯ ಅಲಂಕಾರಿ
ಹೇ, ಎನ್ನ ಪ್ರಿಯ ಪುಷ್ಪ ಮೋಹಿನೀ !
Let my eyes behold
thy sweet form !

— o —

ಮಾನವೀಯತೆ

ಪೂರ್ವ ಜನುಮ ಪುಣ್ಯವಶಾತ್ ಈ
ಜನುಮದಲಿ ಮಾನವ ಜನುಮವೆತ್ತಿ
ಮಾನವನಸುವಳಿಯೆ ದುಃಖವಿಲ್ಲಂ ;
ಮಾನವೀಯತೆಯಳಿಯೆ ಕಡು ದುಃಖ !
ಬಾಳು ಬದುಕು ಸಾರ್ಥಕವೆನಿಸಲ್
ಮಾನವೀಯ ಧರ್ಮ ಪರಮ ಧರ್ಮ !
ಅದಂವಿಾರಿ ಪಿರಿದಿನ್ನೊಂದಿಲ್ಲ.
ಮಾನವತೆಯ ಉದ್ಧಾರವೆ ಎಲ್ಲ
ಧರ್ಮೋದ್ಧಾರವೆಂಬುದ ಜಾನಿಸ್ಯೆ !
ಅರಿತರಿತು ಬಟ್ಟೆ ತಪ್ಪಿದೊಡೆಲ್ಲಿ
ಮಾನವೀಯತೆಯ ಪರಿಕಲ್ಪನಾ ?
ಯೊಜನಾ ಮೇಣ್ ಸಂಯೋಜನಾ ?

— o —

ಮಾಯೆ

ಜಗದ ಮೋಹ ಮಾಯೆ
ಮುಸುಗಿ ಎನ್ನ ಮನವ
ಅದುಮುತಿಹುದು ಒತ್ತಿ
    ತೊಡೆಯಲಾರೆ ತಾಯೆ !

ಬೇವು ಬೆಲ್ಲ ಕೂಡಿ
ಭ್ರಾಂತಿ ಹಿಡಿಸಿ ಮನಕೆ
ಅದುಮುತಿಹುದು ಒತ್ತಿ
    ತೊಡೆಯಲಾರೆ ತಾಯೆ !

ನೀನೆ ಶಕ್ತಿಮಾಯೆ
ನೀನೆ ಮಂತ್ರಮಾಯೆ
ನೀನು ಇಲ್ಲದೆಲ್ಲಿ
    ತೊಡೆವೆನೆನ್ನ ಮಾಯೆ ?

ನೀನೆ ಬಂದು ಸಲಹು
ಮಂತ್ರ ಮಾಯೆ ತೊಡೆದು
ನೀನು ಇಲ್ಲದೆಲ್ಲಿ
    ತೊಡೆವೆನೆನ್ನ ಮಾಯೆ ?

— ೦ —

ಕಂದಾಚಾರ

"ಮನೋ ಮಾತ್ರಂ ಜಗತ್ ಮನಃ ಕಲ್ಪಿತಂ ಜಗತ್"

ಮತಿ ಮೌಢ್ಯದ ಮೂಸೆಯಲಿ ಪೊದಳ್ವ
ಬೇಕು ಬೇಡಗಳವತರಣಕೆ ಈ
ಜಗದೊಳ್ ಕೊರವಿಲ್ಲಂ. ಏಗಳಂ
ದಿನಮಾನದಲಿ ರಾಹು ಕಾಲದಾ

ಮಿಂಗಡಣೆ. ರಾಹುಕಾಲದಲಿ ಶುಭ
ಕಾರ್ಯವರ್ಜ್ಯಂ ! ಆದಿನಮಿಾದಿನ
ಕೆಡುಕು ! ಆಗಳಿಗೆ ಈಗಳಿಗೆಗಳ್
ಕೆಡುಕು ! ಎಂದೆಂಬ ಸಂಕೆಯಿಂದಲಿ

ಜೋಯಿಸರ ಕಂಡು ಕಣಿ ಕೇಳ್ವೊಂದು
ತಳ್ಳಂಕ ಮೇಣ್ ಜನ್ಮಯೋಗಂ
ತಿಳಿಯೆ ಜಾತಕವ ನೋಡಿಸಿ ಒಳಿತು
ಕೆಡುಕುಗಳ ಕಳೆಯೆ ಪೂಜೆಗೀಜೆಯು

ಗೈದು ಹಲ್ಲಿ ಶಕುನ, ಕಾಗೆ ಶಕುನ
ಮನದಿ ನೆಲೆಯಿರೆ ಪಜ್ಜೆ ಪೆಜ್ಜೆಯುಂ
ನಿಚ್ಚ ದುಶ್ಶಕುನಗಳ ಪಾಲಲ್ತೆ ?
ಮತಿಗೆಟ್ಟು ಮನಗೆಟ್ಟು ಹಳೆಹಳೆಯ

ಕುವಿಚಾರ ಮೇಣ್ ಕಂದಾಚಾರ
ವಿಜೃಂಭಿಸಿವೆ ಹಸಿಮನದ ಹಸಿವೆ

→

ಪೂರೈಸುವವೊಲ್ ! ಎಚ್ಚರಿರು ಮನವೆ,
ಕಲಿತು ಬಲಿತು ಹಸಿಮಡಿಕೆಯಾಗದಿರ್ !
ಎಂದೆಂದಿಗು ಪರಿಹಾಸವಸರುವ
ಕವಿಕೃತಿಗೊಂದು ಬಿತ್ತ್ಯಾಗುವೊಲ್ !
When the mind is serene
truth shines

— o —

ಪುಢಾರಿ

ದುರಾಸೆಯ ಕುಂಡದಿ ಮುಳುಗಿ
ಮನಗೆಡಿಸಿ ಬುದ್ಧಿಗೆಡಿಸಿ
ಕೊಚ್ಚೆಯಲಿ ರೊಚ್ಚೆಯಲಿ
ಎಲ್ಲಂದರಲ್ಲಿ ಕಾಸು ಹೆಕ್ಕಿ
ದೀನದಲಿತರ ಶೋಷಣೆಗೈದು
ಡೊಳ್ಳು ಬೆಳೆಸಿ ಮಡಿಯಿಟ್ಟು
ದೇಶಸೇವೆಯ ನೇಮದಲಿ
ಲೋಕದ ಕಣ್ಣಿಗೆ ಮಣ್ಣೆರಚಿ
ಮೆರೆವನ್ನೈ ರಂಗುರಂಗಿನಲಿ
ಛದ್ಮವೇಶದ ದುಷ್ಟಪುಡಾರಿ !

— o —

ನಾನು ನೀನು....

ಪಾಪ ಪುಣ್ಯ ಎನ್ನ ಬೀಡು
ಪಾಪ ಬಿಡದು ಪುಣ್ಯವನ್ನು
ಪುಣ್ಯವೆನ್ನ ಎತ್ತಲುಂಟಿ
ಪಾಪವೆನ್ನ ನಿಳುಪಲುಂಟಿ
ಪುಣ್ಯಪಾಪವೆರಡು ಜಗದ
ಮಾಯೆಯೊಳಗೆ ಐಕ್ಯವಾಗಿ
ಬಲೆಗೆ ಬಿದ್ದ ಹಕ್ಕಿಯಂತೆ
ಪಥವ ಕಾಣದಳಲುತಿರುವೆ.

ಮುಂದಿನ ಗುರಿ ತಡಕಲಾರೆ
ಇಂದಿನ ದಾರಿ ಬಿಡಲುಲಾರೆ
ಹಿಡಿದ ಕೆಲಸ ಮುಗಿಸಲಾರೆ
ಜನವೆನನ್ನ ತಡೆಯಲಿಲ್ಲ
ಮರಣವೆನ್ನ ಮುಟ್ಟಲಿಲ್ಲ
ಲೋಕವೆನ್ನ ದೂಡಲಿಲ್ಲ
ನೀನು ನಾನು ಬೇರೆಯಲ್ಲ
ನಿನ್ನ ಬಿಟ್ಟು ಇರಲು ಆರೆ

ನಾನು ನೀನು ಒಂದುಗೂಡಿ
ಆದಿ ಇಲ್ಲ ಅಂತ್ಯವಿಲ್ಲ
ಭಂಗ ಬನ್ನ ಮುಗಿಯಲಿಲ್ಲ
ಸುಖದ ಕಣವು ಮಿಂಚಿಹೋಗಿ

→

ದುಃಖದ ಸೆಲೆ ನಿಚ್ಚವಾಗೆ
ನಿನ್ನ ಬಿಟ್ಟು ಸರಿಯಲಿಲ್ಲ
ನೆನೆದು ನಿನ್ನ ಗೀಚಿ ಬರೆದು
ನಿಚ್ಚವಾದೆ ಕಾವ್ಯ ಜಗಕೆ.
Let my hands be utilised
in thy service

— ೦ —

ಯುದ್ಧ

ಯುದ್ಧ ಮತ್ತದರ ಅನಾಹುತ
ವಿಶ್ವಜಗತ್ತಿನ ಕಣ್ಣು ಕುಕ್ಕಿರೆ
ನೆಣಗೊಬ್ಬಿನ ಬುದ್ಧಿ ಮಾನ್ಯರ್
ನಿರ್ಲಕ್ಷಿಸಿ ಮುಂದಿರುತಿರೆ
ಯುದ್ಧದ ಗೀಳು ತಪ್ಪಿಸಲ್
ಮಹಿಳಾಮಣಿಗಳಿಂ ಮಾತ್ರ
ಸಾಧ್ಯವೆಂಬುದು
ಎಂದೆಂದಿಗೂ ನಿತ್ಯ ಸತ್ಯ.
ಆದಕಾಗಿ ಸ್ತ್ರೀಗೆ ತಕ್ಕ ಶಿಕ್ಷಣ
ಬೇಕೆಂಬುದೂ ಸತ್ಯಸ್ಯಸತ್ಯ.
ರಿತೆ ಜ್ಞಾನಂ ನಮುಕ್ತಿಃ

— ೦ —

ವಿಶ್ವ ಕನ್ನಡ ಸಮ್ಮೇಳನ

ಪ್ರಪ್ರಥಮ ವಿಶ್ವ ಕನ್ನಡ ಸಮ್ಮೇಳನ !
ಲೋಕ ಪ್ರಜ್ಞೆಗೆ–ದೂರದೃಷ್ಟಿಗೆ ಅಪೂರ್ವ ಸಮ್ಮೇಳನ
ಛಿದ್ರವಿಚ್ಛಿದ್ರವಾದ ಕನ್ನಡಿಗರ ಸಮ್ಮಿಲನ !
ಪವಿತ್ರ ಕಾವೇರಿಯ ತಡಿಯಲಿ ವಿಜೃಂಭಿಸುವ
ಮೈಸೂರಿನ ವೈಭವೋಪೇತ ಅರಮನೆಯ
ಆವರಣದಲಿ ಕನ್ನಡಿಗರ ಮಹಾ ಮಂಡಳಂ.
ಮೇಣ್ ಅದೊಂದು ಮಹಾ ದಾಂಬಿಕತನದಾಗರಂ
ಕರತೆತ್ತ ಶ್ರಮಿಕರ ಒಡಲುರಿಗೆ
ನೆಯ್ಯನೆರೆಯುವ ತಣ್ಪಿನಾಗರ !

ಓ, ಅದು ವಿಶ್ವ ಕನ್ನಡ ಸಮ್ಮೇಳನ !
ವಿದೇಶಕೆ ಹೋದ ಕನ್ನಡಿಗರಿಗೊಂದು ಸದವಕಾಶ !
ತಮ್ಮ ತಾಯ್ನೆಲದಲಿ ಒಗ್ಗೂಡಿ
ತಮ್ಮವರನು ಕಣ್ತುಂಬ ಕಾಂಬ
ಹುಮ್ಮಿನಲಿ, ಅಖಿಲ ಲೇಖಕರಂ ಕಾಂಬ
ನೆಮ್ಮಿನಲಿ ಓಡೋಡಿ ಬಂದರೈ
ದೇಶವಿದೇಶಗಳಿಂ ಆನಂದದಿಂ !
ಓ...ಮೇಳ ! ಮಹಾಮೇಳ ! ಸಿರಿಗನ್ನಡ ಮೇಳ !
ಸಾವಿರದೊಂಭೈನೂರೆಂಭತ್ತೈದನೆಯ
ಡಿಸೆಂಬರ್ ತಿಂಗಳ ಮೂರನೆಯ ತೇದಿ !
ಅಲ್ಲಿ–ಇಲ್ಲಿ ಮೈಸೂರಿನ ತುಂಬೆಲ್ಲಾ ಮೇಳವೇ ಮೇಳ !
ನಮಸ್ಕಾರ ವಿನಿಮಯ ; ಹಲೋ ಹಲೋ ವಿನಿಮಯ ;
ಕ್ಷೇಮ ಸಮಾಚಾರಗಳ ವಿನಿಮಯ.

→

ಅದೊಂದು ವಿಶ್ವ ಕನ್ನಡ ಮೇಳ !
ದೇಶದ ಬೊಕ್ಕಸ ಬರಿದಾಗುವನಿತು ಡಾಂಭಿಕತನದ
ಮಹಾ ಮೋಜಿನ ಸಮ್ಮೇಲನ !
Show-.Show- ಬರೀ Show
ಸಾರ್ವಜನಿಕರ ಬೌದ್ಧಿಕ ಕರಂಡಕೆ
ಲಭ್ಯವಾದುದು ಬರಿ ಸೊನ್ನೆ !
ಶ್ರಮಿಕರ ದ್ರವ್ಯರಾಶಿ ಕರಗಿ ಹೋಯಿತ್ತೈ
ಸುಡುಬಿಸಿಲಟ್ಟದ ಮಂಜಿನವೊಲ್ !
ಬುದ್ಧಿಮಾನ್ಯರ ದಿನಚರಿಗೆನಿತೋ ಧಕ್ಕೆ !
ಲೇಖನಿಯ ಶ್ರಮಸಾಧನೆಗೆ
ಮೇಣ್ ಪ್ರಕಾಶಕರ ಶ್ರಮಸಾಧನೆಗೆ
ಬಂದುದು ಸೊನ್ನೆ...ಬರಿಯ ಸೊನ್ನೆ !
ಸರಕಾರಿ ಕಛೇರಿಗಳಿಗೆ ಬಿಡುವು ;
ಅಧಿಕಾರಿಗಳಿಗೆ ಢಾಂಬಿಕತನದ ಅತ್ತಿತ್ತ ತಾಕಲಾಟ !

ಇನ್ನು ಪುಸ್ತಕ ಮೇಳ ಕೇಳಿ !
ಅದೊಂದು ಸುಸುಂದರ ಮೇಳ !
ಗ್ರಂಥಗಳಂ ಕೊಳ್ಳಲಿಲ್ಲ ; ಬೇಡಿ–ಕಾಡಿ ತಂದರ್ !
ಕೊನೆಗೆ ಪಿಂತಿರುಗಿಸುವ ಭರವಸೆಯಿರಲ್
ಕೊಟ್ಟರೆಲ್ಲ ಲೇಖಕರ್–ಪ್ರಕಾಶಕರ್ !
ಬಂದವರೆಲ್ಲ ಪುಸ್ತಕ ರಾಶಿರಾಶಿನೋಡಿ
ಭಲೆ ! ಎಂದರ್ ಮನತುಂಬಿ. ಎದೆತುಂಬಿ.
ನಾನು ನೋಡಿದೆ ಕಣ್ತುಂಬ
ಆ ಮಹತ್ ಪುಸ್ತಕ ಮೇಳ !
ಕನ್ನಡ ಕನ್ನಡ ಕಸ್ತೂರಿಯು ಘಮಘಮ
ಪರಿಮಳಿಪ ಕನ್ನಡ ಪುಸ್ತಕ ಮೇಳ !
ವಿಶ್ವ ಪುಸ್ತಕ ಮೇಳದಲಿ →

ನನ್ನ ಇಪ್ಪತ್ತೊಂದು ನಲ್ ಗ್ರಂಥಗಳ್
ಒಂದೇ ರೀತಿಯ ಒಂದೇ ನಿಲುವಿನ
ಒಂದೇ ವಿಧದ
ಸುಸುಂದರ ಗ್ರಂಥಗಳು !
ವಿಶ್ವ ಮೇಳವನು ಪ್ರತಿನಿಧಿಸಿದ
ಅದೃಷ್ಟವಂತ ಗ್ರಂಥಗಳು !
ನಾನೂ ನೋಡಿದೆ...ಹಿಗ್ಗಿ ನೋಡಿದೆ !
ಕಟ್ಟಕಡೆಗೆ ಕೊಟ್ಟ ಅನೇಕರಿಗೆ
ಮೂರು ಪಟ್ಟಿ ನಾಮ !
ಆ ಪಟ್ಟಿ ನಾಮ ಬಳಿಸಿಕೊಂಡವರಲಿ
ನಾ...ನೊ...ಬ್ಬ...ಕವಯಿತ್ರಿ !
ಪುನರ್ಮುದ್ರಣಕಾಗಿ ಉಳಿಸಿಕೊಂಡಿರ್ದ
ಕೊಟ್ಟಕೊನೆಯ ಪ್ರತಿಗಳ್–
ಇಪ್ಪತ್ತೊಂದು ಅಮೂಲ್ಯ ಗ್ರಂಥಗಳ
ಪ್ರತಿಗಳ್ ವಿಶ್ವಕನ್ನಡ ಮೇಳದಲಿ ಗುಳುಂ !
ಸಣ್ಣ ಅಧಿಕಾರಿಗಳ
ಸಣ್ಣ ಆಚಾರಕೊಳಗಾಗಿ ನನ್ನ ಕೈತಪ್ಪಿ
ಕಂಬನಿ ತರಿಸಿದುವು ಕಣ !
ಇದು ವಿಶ್ವ ಕನ್ನಡ ಮಹಾ ಮೇಳ !
ಕೇಳಿ ಕೇಳಿ ಕಾಡಿ ಬೇಡಿದ ಬಳಿಕ
ಮೂದಿಂಗಳು ಅಲ್ಲಿ ಇಲ್ಲಿ ಬಿದ್ದು
ಗೋಳಾಡಿ ಹಾಳಾಗಿ ಬಂದುವವು
ನೊಂದ ಮನವ ತಣಿಸೆ

— ೦ —

ಕೂಡುದಾರಿ

ನಮೃಷಾ ಪರಮಾರ್ಥಮೇವ ಮೇ
    ಶೃಣು ವಿಜ್ಞಾಪದಮೇಕಮಗ್ರತಃ।
ಯದಿ ಮೇನ ದಯಿಷ್ಯಸೇ ತತೋ
    ದಯನೀಯಸ್ತವನಾಥ ದುರ್ಲಭಃ॥

ಪುಟ್ಟನಿಂದೆ ಅಂತ್ಯದವರೆಗೆ ಬಾಳದೋಣಿಯಲಿ
ಚುಕ್ಕಾಣಿವಿಡಿಯೆ   ನೀನಲ್ಲದಾರ್ ಕಲಿಪುವರ್ ?
ನಿನ್ನ ವರದ ಹಸ್ತ ಅಭಯ ನೀಡೆ ಲೋಕವೆಲ್ಲ
ನೇರ ಗುರಿಯ ಜಾಡು ಹಿಡಿದು ತನನ ತಾನ ತಾಯೆ !

ನಿನ್ನ ಕರುಣೆಯಿಂದೆ ಜಗದ ಬೆಳಕ ಕಂಡೆ ನಾನು
ಮೇಣ್ ತಿಪ್ಪ ತಿಪ್ಪ ಹೆಜ್ಜೆಯಿಡಲು ಕಲಿತು ನಡೆದೆ ;
ಜೀವಮಾನವೆಲ್ಲ ನಡೆದು ಇಲ್ಲಿತನಕ ಬಂದೆ,
ಕಣ್ಣ ಮುಂದೆ ಕೂಡುದಾರಿ ಕಂಡು ನಿಂದೆನಿಲ್ಲಿ.

ಇಂದುವರೆಗೆ ಬಂದ ಭಂಗ ಪೇಳಲಾರದೆ ತಾಯೆ !
ದುಃಖ ಬಾರ ಭರಿಸಿ ನೀರ್ಗಣ್ಣು ಮಂಜು ಮಂಜು !
ಮುಂದೆ ಯಾವ ದಾರಿ ಹಿಡಿಯಲೆಂದು ಅರಿಯದಾನು
ನಿನ್ನ ಬೇಡಿಕೊಳ್ವೆ ದೂರ ನಡೆಯಲಾರೆನಿನ್ನು.

ನಾಲ್ಕು ದಿಶೆಗೆ ಹರಿದ ದಾರಿ ಬಾರೆ ಬಾರೆ ಎಂದು
ಕರೆಯೆ, ದೇಶ ಕಾಣದಾನು ಹೋಹಲರಿಯೆ ತಾಯೆ !
ಮನವು ಮಿಡುಕಿ ಎದೆಯು ನಡುಗಿ ನಿನ್ನ ಬೇಡುತಿಹೆನು
ನೇರ ದಾರಿ ತೋರಿ ಮುಂದೆ ನೀನೆ ನಡೆಸು ತಾಯೆ !

— • —

Trafalgar Square

ಯೂರೋಪ್ ಪ್ರಾಂತೀಯ ಲಂಡನ್ ಮಹಾನಗರ
ಸುವ್ಯವಸ್ಥಿತ ನಗರಗಳ ಪಂಕ್ತಿಯೊಳ್ ನಿಲ್ವನಿತು
ಶ್ರೀ ಷ್ಠಮಾ ಧವಳ ಕೀರ್ತಿಯಂ ಮೈಗೊಂಡವೊಲ್ !
ಅತ್ಯಂತ ಶ್ರೇಷ್ಠ ಕೃತಿಗಳ ಭಂಡಾರ ನಗರಿ !
ಅದ್ಭುತ ಮಹಲ್‌ಗಳ್ ಮಹಾಸ್ಮಾರಕಗಳ್ ವಸ್ತು
ಪ್ರದರ್ಶನಗಾರಗಳ್ ಅರಮನೆಗಳ್ ಮಹಾನ್
ಚರ್ಚುಗಳ್ ಉದ್ಯಾನಗಳ್ ಸುಭದ್ರ ಸೇತುಗಳ್
ಮಾಕಾರಖಾನೆಗಳ್ ರಾಷ್ಟ್ರೀಯ ಕಛೇರಿಗಳ್
ಮಹಾಸ್ತಂಭಗಳ್ ಇಂತಪ್ಪ ದಿವ್ಯ ಜಗದ್ಭವ್ಯ
ಸಂಗದಿಂದೊಪ್ಪಿದ ನಗರಿ ಜ್ಞಾನಪ್ರಜ್ಞಾನ
ವಿಜ್ಞಾನಗಳಿಂ ಸಂಯೋಜಿತ ಸಿರಿ ಬಂಧುರಂ !
ಸೌಂದರ್ಯಮುಂ ಸತ್ಯ ಸುಂದರಗೊಳಿಪ್ಪವೊಲ್
ಸರ್ವತ್ರ ಸುಸುಂದರಂ. ಲೋಕದೊಳ್ ಕಣ್ಗೆತ್ತ
ಸೃಷ್ಟಿ ಸೌಂದರ್ಯಕೆ ಹೆಗಲೆಣೆಯೊ ಎನೆ ಮಾನವ
ಸೃಷ್ಟಿ ವಿಶ್ವಮಾನ್ಯಂ ಅನಂತಂ ; ಅದ್ಭುತಂ !
ಮಿನ್ನೆ ಇಂಗ್ಲೆಂಡ್ ದೇಶೀಯ ಸೇನೆಯ ಧೀರ
ಮಹಾದಳಪತಿಯೈಸಿ ರಾಷ್ಟ್ರೀಯ ಬಲಿಷ್ಠತೆಗೆ
ಪ್ರಾಣಮುಂ ಪಣಕಟ್ಟಿ ಹೋರಾಡಿ ಗತಿಸಿರ್ದ
ಇತಿಹಾಸ ಪ್ರಸಿದ್ಧ ಮಹಾ ವೀರಾಧಿವೀರ
ನೆಲ್‌ಸನ್-ನ ಜ್ಞಾಪಕಾರ್ಥಂ ಸ್ಥಾಪನೆಗೊಂಡಿಶಾ
Trafalgar Square ! ಮಧ್ಯೆ ಗಗನಕೇರ್ವಡೆದ
ಮಹಾಸ್ತಂಭ ! ಅಹ, ಏಂ ಭವ್ಯಾಕಾರಂ ! ನೋಳ್ಪ
ಕಣ್ ಮರಗಟ್ಟುವೊಲ್ ರುದ್ರ ರಮಣೀಯ ಸೌಂದರ್ಯ

ತೇಜದಿಂದೊಪ್ಪಿ ಕಿಂಚಿತ್ ಅಚ್ಚಳಿಯದೆ ನಿಂದ
ಬೃಹದ್ ಸ್ತಂಭ ! ನೆತ್ತಿಯೊಳ್ ಲಾರ್ಡ್ ನೆಲ್‌ಸನ್ ಮಹಾ-
ಶಯನ ನಿಂತ ನಿಲುವಿನ ಮೂರ್ತಿ ! ನಾಲ್ದೆಸೆಯೋಳ್
ಆನವೆತ್ತ ಸುಂದರ ಶಿಲ್ಪ ಕೇಸರಿಗಳ ಶ್ರೀರಕ್ಷೆ.
ಮೇಣ್ ಸಹಸ್ರಸಹಸ್ರ ಕಪೋತಂಗಳ ಲಾಲನೆ
ಪಾಲನೆ ಮೇಣ್ ಸಹವಾಸದಲಿ ಲಾರ್ಡ್ ನೆಲ್‌ಸನ್
ಪರಮ ಸುಖಿ ! ಕಪೋತಗಳ ಪರಿವಾರಂ ಇನಿತು
ಭಯ ಭೀತಿಯ ಗಾವರವಿಲ್ಲದೆಯೆ ಅಲ್ಲಲ್ಲೆ
ಹಾರಾಡಿ ಶೃಂಗಾರ ಚಿತ್ರಂ ಪಡಿ ಮೂಡಿಸಿ
ನಲಿನಲಿವ ಸೌಂದರ್ಯ ವಾರಾಶಿಯ ನೋಡಾ !
ಕಂದು ವರ್ಣದ ಪಕ್ಷಿ ಸಂಕುಲಂ ನೋನೋಡಿ ಮೈ
ಮನಂ ಕಂದಪ್ಪುವೊಲ್ ಕಂದು ವರ್ಣದ ಮಹಾ
ಸಂಗಂ. ಪುಟಪುಟಿವ ಸುಸುಂದರ ಜೀವಿಗಳ
ಆನಂದ ಲೋಕವಮಾ Trafalgar Square !
ಶೋಣವರ್ಣಾಂತು ಶೋಭಾಸಂಪತ್ತಿಯಿಂದೊಪ್ಪಿ
ಲೋಕಮಾನ್ಯತೆ ಪಡೆದ ಧೀರ ಸಾಂಕೇತಿಕ ಶೈಲಿ !
ಕವಿತಾ ಹೃದಯದ ಕವಿತಾರಸನೆಯ ಸರಿಹರಿಯೆ
ರಸದೃಷ್ಟಿಯೀಕ್ಷಣಂ ಕಾವ್ಯಮತಿ ಪೂರಕಂ !
Full bravely hast thou fleshed
thy maiden sword

— o —

ಇತಿಹಾಸ

ಕಾಲ ಕಾಲದ ನಿರ್ಣಯಂಗಳ್
ಪ್ರಪಂಚದ ಇತಿಹಾಸ
ಎಂಬುದನಾರ್ ಅರಿಯರ್

— o —

ಮುಕ್ತಿ

ಬಾಳೆಲ್ಲವು ವ್ರತವಾಗಿರಲೆಮಗೆ
ಜಪಮಣಿ ಸರವೆಣಿಸಲು ಬೇಕೆ ?
ಸುಂದರ ಜಗವೇ ದೇಗುಲವಾಗಿರೆ
ಬೇರೊಂದು ಗುಡಿಯ ಹೊಗಲೇಕೆ ?

ಶಾಂತಿಯ ಪಡೆಯಲ್ ಗಾನರಸವಿರಲ್
ಕವಿಮನಕೆ ಬೇರೆ ಜಪವೇಕೆ ?
ಬನಬನದಲಲೆವ ಭಾವಘನವಿರಲ್
ಶಾಸ್ತ್ರದ ಬಂಧನ ಕವಿಗೇಕೆ ?

ನಿಸರ್ಗ ಪೂಜೆಯು ಕಂಗಳೆ ಮಾಳ್ಪವು
ಬ್ರಹ್ಮನ ಸೃಷ್ಟಿಯ ನೋನೋಡಿ
ನವ ಕವಿತಾರಾಗವ ಕೋದು ನಿಚ್ಚ
ಮಧುರಪದದಲಿ ಪಾಡುವೆ ಪೊಗಳಿ.

ಎನ್ನರಿಕೆ ಸಲ್ಪುದು ಕವಿತೆಯ ಹಾಡೆ
ಸಾಧನ ಮಾರ್ಗವು ಬೇರೇಕೆ ?
ಸಂಗೀತವೇ ವರ ಧ್ಯಾನವು ರಸಕವಿಗೆ
ಮುಕ್ತಿಗದೆ ದಾರಿ ಬೇರೇಕೆ ?

Music when soft voices die,
Vibrates in the memory

— ೦ —

ತುಂಗಾನದಿ

ಸಹ್ಯ ಪರ್ವತರಾಜ ಪಪತಲ ಪರಿಪೋಷಿತ
ಸುನೀಲ ಸಲಿಲವಾರಿ ರಾಶಿಯು ಜಲತರಂಗೆ !
ನಿಚ್ಚ ಜುಳುಜುಳು ಮಂಜುಳಗಾನಲಹರಿಯಾ
ದಿವ್ಯ ಮೊಳಗು ನಿನ್ನಯ ಅಭಿರಾಮ ಭಂಗಿಯಲಿ !
ಘನ ನಿಬಿಡ ವನಮಾಲಿನಿಯೆ, ಪುಣ್ಯ ಶಾಲಿನಿಯೆ !
ತವ ಜಲನಿಧಿಯ ನೋಡಿದನಿತು ತಣಿಯದು ಮನ
ಪರಿ ಭಾವಿಸಿದನಿತೂ ಸಾಲದು ಚಿತ್ರಕಲ್ಪಕೆ.
ನೀರವ ನಿರ್ಮಾನುಷ ನಿರಾತಂಕಪೂರ್ಣಮಾ
ಪುಣ್ಯ ಸಲಿಲವಾರಿಯು ನಿಚ್ಚ ನಡೆಯು ಪ್ರವಾಹ
ಏಂ ಶಾಂತಪ್ರಶಾಂತಮಾಶಾಂತನಿಶಾಂತಮೊ !
ಇಕ್ಕೆಲದಿ ಫೇನ ಪುಂಜವನೊತ್ತಿ ಮಿಾಂಗಳಂ
ಮೇಣಿತರ ಚರಾಚರಗಳ ಲಾಲಿಸುನೆಯಲ್ತೆ ?
ದಿವ್ಯಮಾ ಅಸ್ತಮಾನ ಶೋಭೆಯ ಕಮನೀಯ
ಕನಕ ಕಾಂತಿಯಲಿ ಮಿಂದಿರುವವೊಲ್ ಥಳಥಳಸುತ
ನೋಳ್ಪ ಕಂಗಳಿಗೆ ಔತಣವೀವ ನಿನಗಂ ನಮನ !
ಪಚ್ಚಪರ್ಣಾರ್ಣವದ ಶ್ಯಾಮಲ ಸುಷುಪ್ತಿಯಲಿ
ರಾರಾಜಿತ ಕುಸುಮ ಕುಲಕೋಟಿಯ ಸೌಗಂಧ
ಪ್ರಸರಿಪ ಮೇಣ್ ಪಕ್ಷಿ ಕೂಜನ ರವ ಭರಿತ
ತವ ಪಾತ್ರ ಎಂತಪ್ಪ ಸ್ವರ್ಗತುಲ್ಯತಾಣಮೊ ?
ಹೇ, ತಾಯೆ ! ಮಲೆನಾಡಿನ ಜೀವನ ಮೋದಿನಿ.
ಪೂರ್ವ ಪರ್ವತದುತ್ತಮಾಂಗದಲಿ ಮೈದೋರಿ
ಪಶ್ಚಿಮಾಭಿಮುಖಿಯಾದ ತಪಸ್ವಿಸಿಯೇ, ಹೇ

→

ನೀಲ ಶುಭ್ರಾಂಬರಧರೆ, ತ್ರಿಲೋಕಮಾನಿನಿ ;
ತುಂಗೆ ! ಮಮ ಜೀವನೀಯ ಪರಮಾನಂದ ಗಂಗೆ !
ನೀನಹುದು ಸರ್ವಮಾನಿನಿ ! ಮಂಗಳದಾಯಿ !
ನಿನಗೆ ಕವಿ ಮನಃಪೂರ್ವಕ ವಿನಮ್ರ ನಮನ !

A river glideth at
its own swəet will

— ೦ —

ಕುಡುಕ

ಕುಡಿದು ಕುಡಿದು ಕುಡಿದು
ದೇಶೀಯ ಹೆಂಡ ಸರಾಯಿ

ವಿದೇಶೀಯ ಬ್ರಾಂಡಿ ವಿಸ್ಕಿ
ಒಡಲ್ಗಿಚ್ಚಿಗೆ ನೆಯ್ಯನೆರೆದು

ಕಾಮನೆಯ ಕೀಳ್ಗಯ್ಗಳ್ಗೆ
ಖಡ್ಗವನಿತ್ತು ಮಡದಿ

ಮಕ್ಕಳ್ಗೆ ಪೆಮ್ಮಾರಿಯಾದಪನ್ನೈ
ಕೀಳರಿಮೆಯ ಕುಡುಕ

— ೦ —

Baikal

ಲೋಕದೊಳ್ ಆಳವರಿಯಲಾಗದ
ಎನಿತೆನಿತೊ ಅದ್ಭುತ ವಿಶೇಷಗಳ್ !
ಮನುಜ ಮತಿಗೆ ಮೀರಿದ
ವಿಜ್ಞಾನ ಕೃತಿಗೆ ನಿಲುಕದ
ನಿಗೂಢ ಶಕ್ತಿಯಂ ಜಾನಿಸು ನೀ ಮನವೇ !
ನೈಸರ್ಗಿಕ ನಿಜ ಸಂಪತ್ತಿಯು ಮುಂದೆ
ಎಲ್ಲಿಯು ಮಾನವ ಪ್ರಜ್ಞೆ ಪೇಳ್ !
ರಷ್ಯ ರಾಷ್ಟ್ರೀಯ
ಬೈರೂತ್–ಮಂಗೋಲಿಯ ಪ್ರಾಂತೀಯ
ಸುರಸುಂದರ ತಾಣದಲಿ ನಲೆಗೊಂಡು
ಸುತ್ತಮುತ್ತಣ ಪರಿಸರಂ ಪಸುರ್ತುಂಬಿ
ಪಸುರಕ್ಕುವನಿತು ಪಚ್ಚ ಪಸುರಿನ
ನಲ್ದಾಣದಲಿ ಮೈ ಗೊಂಡ
ಮಹಾ ಸರೋವರ **Baikal**
ಅಮಮ ! ಏನದ್ಭುತಮೊ ಈ ಜಗದೊಳ್ !
ಮುನ್ನೂರಕೂ ಮೀರಿ ನದಿಗಳ
ಮಹಾಜಲಶಾಶಿಯಂ ಹೀರಿ
ಒಡಲ್ತುಂಬಿ, ಮೈದುಂಬಿ ಹಿರಿಹಿರಿ ಹಿಗ್ಗಿ
ಅಗಲಗಲ ಊರಗಲ ಹಬ್ಬಿ
ಭೂಮಿಯ ಒಡಲಾಳಕಿಳಿದು
ಲೋಕ ಪ್ರಖ್ಯಾತಿ ಪಡೆದ ಮಹಾ ಸರೋವರ !
ಮಹಾವಾರ್ಧಿಗೆ ಹೆಗಲೆಣೆಯೋ ಎನೆ

→

ಅಪಾರ ಭೂಮಿಯಲಿ ವಿಸ್ತರಿಸಿ
ಸ್ವಚ್ಛ ನಿರ್ಮಲ ಜಲರಾಶಿ
ಥಳಥಳಿಸುತಿರೆ ತಾನಾದುದು
ಜಗದೊಳೊಂದು ಅದ್ಭುತ ವಿಶೇಷಂ !

Earth and ocean seem
to sleep in one another's arms

— o —

ಕಾಯಿದೆ

ಕಾಯಿದೆಗೆ ಕಣ್ಣಿಲ್ಲವೆನುತೆ
ಸುಮ್ಮನಿಪ್ಪರೆಲ್ಲ
ಕಾಯಿದೆ ಗೈದಪರಾಧ
ಕ್ಷಮಾರ್ಹವಲ್ಲಂ.
ಹೇಡಿತನದ ಚಿನ್ಹೆಯಲ್ತೆ
ಮೌನದಾಚರಣೆ ?

— o —

ನೌಕಾಯಾನ

ನಿಂತ ನೀರೆನೆ ಶಾಂತವಾದೊಡಂ ಜಳಜಳಿಪ
ಧುಮುಧುಮಿಪ ಘೋರಾಡಿ ರಪ್ಪನೆ ಅಪ್ಪಳಿಪ
ಮಹಾ ಸಾಗರ ! ಸುನೀಲ ವಸನೆಯು ಸಾಗರ !
ಅಲೆಯಲೆಯೈಸಿ ಸಂಚಲಿಪ ರಮ್ಯ ಜಲ ರಾಶಿ !
ನಿಚ್ಚಂ ರವಿ ಕಿರಣಗಳ ಬೆಚ್ಚನ್ನ ಮುದ್ದಿಗೆ
ಅತ್ತಿತ್ತ ಚಿಮ್ಮಿ ಬಹ ಮಿಂಚು ಮೈಯಿನ ಅಂದ
ಚೆಂದದಿಂದೊಪ್ಪುವಾ ಮಿಾಂಗಳ ಹೇರಾಶಿ !

ವೆನಿಸ್ ನಗರಿಯಂ ಸುತ್ತಮುತ್ತಲ್ ಆವರಿಸಿ
ಮುದ್ದಿಡುವ ಮೆಡಿಟರೇನಿಯಂ ವಾರ್ಧಿಯು ಬೀದಿ
ಬೀದಿಯಂ ಬೊಕ್ಕು ಮನೆಮನೆಯ ಹೊಸ್ತಿಲಂ ತೊಳೆ
ತೊಳೆದು ನಲ್ಮೆಯಿಂ ಮುದ್ದಿಸುವಂತಿರೆ, ಅಪೂರ್ವ
ಭವ್ಯ ಬಂಧುರ ದೃಶ್ಯಮಾನ ಸೌಂದರ್ಯಮಂ
ಬಣ್ಣಿಸುಗೆ ಬರಿದೆ ಮುಮ್ಮಾತಾದೊಲ್ ವ್ಯರ್ಥಂ !
ಅಲ್ಲಿಯ ದಿನ ನಿತ್ಯದ ವ್ಯವಹಾರ ಕುಶಲತನ
ನೌಕಾಯಾನದ ಮೂಲಕ ಕಣ ! ಆ ನೌಕೆಗಳ
ಅಂದ ಚೆಂದವನೇನೆಂಬೆ ? ಅಲಂಕೃತ ಸುಂದರ
ನೀರೆಯೊಲ್ ಸಜ್ಜನಿಂ ನಿಂತವಂ ನೋಡುತಿರೆ
ಮೈ ಮನಂ ಸುಖಮೂರ್ಛೆಗೊಳುವನಿತು ಕಂಗಳ್ ರಸ
ತುಷ್ಟಂ ! ಅಹಃ ನವನವೋನ್ಮೇಷಶಾಲಿನೀ
ಪ್ರಕೃತಿ ದೇವಿಗೆ ಹೆಗಲೆಣೆಯೊ ಎನೆ ಅಮಿತ
ಮನುಜ ಸೃಷ್ಟಿ ಸಂಪದಮುನ್ನತಂ ! ಪೊಂಬಿಸಿಲ
ಪೊಂಗಾಂತಿಯ ಲೇಪನದಿಂ ಘಳಘಳನೆ ಪೊಳೆವ
ಮಹಾ ಚೈತ್ರದ ನುಣ್ಣನೆಯ ಮೈಗೆ ಉಜ್ವಲಿಪ →

ವಿದ್ಯುದ್ದೀಪಗಳ ಸಿಂಗರಂ ! ಸರ್ವಾಂಗ ಸುರ
ಸುಂದರಿ ಬೈತ್ರದ ಕೊರಳ್ಗೆ ಸಾಲ್ಗೈಸಿ ಗಾಳಿಗೊಂಡ
"ರಬ್ಬರ್ ಟ್ಯೂಬ್"ಗಳ್ ದಟ್ಟಣಿಸಿದ ರುದ್ರ ಹಾರಂ
ಹೆಂಗೊರಳ ಕಾಸಿನ ಮಾಲೆಯುಂ ಪೋಲ್ದಿರೆ ನಿಚ್ಚ
ನಯನಾಕರ್ಷಿತಂ ! ಬೈತ್ರವಲ್ಲಂಗಿದಂತೆಲ್ಲಾ
ಅವುಂ ಗಲಗಲ ಅಲುಗುತಿರೆ ದೃಶ್ಯಮಾನದಾ
ಸೌಂದರ್ಯಂ ಮನಮೋಹಕಂ !
ನೌಕೆಯುಂ ವೀಥಿವೀಥಿಯಲಿ
ಇಳಿವವರನಿಳಿಸಿ ಹತ್ತುವವರಂ ಹತ್ತಿಸಿಕೊಳುತೆ
ಮುಂಬರಿವುದು ಜರ್ರನೆ ನೀರನಿಕ್ಕೆಲಗಳಲಿ
ಹಾರಿಸುತ ಹನಿಮುತ್ತಿನಾಟವಾಡಿ ! ಏಂ ಆ
ಯಾನ ಸೌಭಾಗ್ಯಂ ! ದೇಶೀಯರ್, ವಿದೇಶೀಯರ್
ಗೂಡಿ ಪ್ರವಾಸಿಗಳ ಮಾಸಂಗಂ ! ಚಿತ್ರವಿಚಿತ್ರ
ಭಾಷೆ–ಪರಿಭಾಷೆಗಳಲಿ ಪೊಣ್ಮುತಿರ್ದ ಮಾತಿನ
ಸರಸ ಮಧುರ ಮರ್ಮರ ಮೇಣ್ ಉಡಿಗೆ ತೊಡಿಗೆಗಳ
ಪ್ರದರ್ಶನಮೊ ಎನೆ ಸೌಂದರ್ಯಮುಂ ಸುಸುಂದರ
ಗೊಳಿಪ ಪಾಂಗಿನಲಿ ಸಾಗಿದತ್ತು ಸುದೂರದಾ
ನೆಲೆಗೆ. ಪ್ರತಿ ನಿಲ್ದಾಣದಲಿ ಪಯಣಿಗರ ನಿಜ
ಗಜಿಬಿಜಿ. ಅಹ, ಎತ್ತೆತ್ತಲು ಶೋಣಿತ ಶೋಭಾ
ಶೈಲಿಯು ವೆನಿಸ್ ನಗರಿ ಸ್ವರ್ಗೋಪಮು ಚಿತ್ತಾರ
ಕಣ್ಗೊಳಿಸುತಿರೆ ಆ ನೌಕಾಯಾನದ ಅನ್ಯ
ಅನುಭವ ಮಲ್ಲಿಕಾ ಕಾವ್ಯ ರಸನೆಗೆ ವರ ಬಿತ್ತು ಕಣ !

— ೦ —

ವಿಶ್ವೋತ್ತೀರ್ಣ

ಭವದೊಳು ಜೀವಿಯ ಅಥ ಪ್ರಾಣನ
ಸಂಕಟವ ಆಪಸಿತು ಜಾನಿಸು ಮನವೇ !
ಪ್ರಾಣನ ಸಂಕಟ–ಸಂಕಷ್ಟಗಳಾವುವೈ ?
ನಾನು–ನನ್ನದು ಎಂಬ ಸಂಕುಚಿತ ಭಾವದಿಂ
ಕೊರಗಿ–ಕೊರಗಿ ನಲುಗುವುದು
ಮಹಾ ಸಂಕಟದ ಮೂಲವೇ ?
ಪ್ರಜ್ಞಾನ ಘನತೆ ಇರಲಿ, ಅಜ್ಞಾನ ಘನತೆ ಇರಲಿ
ನಿರಾತಂಕದಿಂ ಉಸಿರಾಡುವುದೆ ಜೀವಧರ್ಮ.
ಜಗದಗಲ–ಮುಗಿಲಗಲ–ಭುವಿಯಗಲ
ಭಾವ ಸಂಗಲ್ಪವಾಗಿರೆ ಸಕಲಂ ಸಂಭಾವ್ಯಂ.
ಕಗ್ಗತ್ತಲೆಯ ಕಾಳತೆರೆ ಹರಿದು
ಛಿದ್ರವಿಚ್ಛಿದ್ರಗೊಳಿಸಿ
ಕಾರ್ಯಕಾರಣಗಳ ಮೂಲವರಿತು
ತರ್ಕವಿತರ್ಕ ಹೂಡಿ ಆತ್ಮವಿಮರ್ಶೆಗೈದು
ಜೀವಾತ್ಮಂ ವಿಶ್ವಾತ್ಮಂಗೂಡಿ
ಒಂದಾಗಿ ಪರಮಾನಂದದಿಂ
ವಿಶ್ವೋತ್ತೀರ್ಣವಾಗೆ
ನಾನು–ನನ್ನದು ಎಂಬ
ಆತ್ಮ–ಅನಾತ್ಮಭಾವ ತೊಲಗಿ
ಜೀವನೊಳ್ ಬ್ರಹ್ಮಾಂಡಲಯವಾಗೆ
ಜೀವ–ಬ್ರಹ್ಮಾಂಡ ಬೇರೆಬೇರೆ ಅಲ್ಲ !
ಅಶ್ವಸ್ಯ ಲಕ್ಷಣಂವೇಗೋ
ಕುದುರೆಗೆ ವೇಗವು ಭೂಷಣವಾದೊಡೆ →

ಮನುಜಂಗೆ ಚಿಂತನಾ ಶೀಲತೆ ಪರಮ ಭೂಷಣಂ.
ಚಿಂತನೆ ಕಾಲ ದೇಶಗಳ ಕೂಸಾದೊಡಂ
ಮನದ ಎಲ್ಲೆಯನು ಸರ್ವಸಾಹಸ ದಾಂಟಿ
ಬ್ರಹ್ಮಾಂಡದಿ ತಾದಾತ್ಮ್ಯಭಾವ ಮೂಡಿ
ಸತತ ಸಂಧಾನುಸಂಧಾನವಾಗಿ
ತನ್ನಲ್ಲಿಯೇ ಸರ್ವಸ್ವ, ಸರ್ವವೂ ತಾನೇ !
ಎಂದೆಂಬ ಅಭೂತಪೂರ್ವ ಸ್ಥಿತಿ
ಮನಃಚಿತ್ತಗಳಂ ಆವರಿಸಿ–ಆಕ್ರಮಿಸಿ
ಮುಂಬೆಳೆಯುತಿರೆ ಭೂಮವಾಗಿ ಪೇಳಲೇನಾ
ವಿಶ್ವೋತ್ತೀರ್ಣ ಮಹದ್ ಘನಂ !
ಲಭೇತ ಸೀತತಾಸು ತೈಲಮಪಿ ಯತ್ನತ ಃ
ಪ್ರಯತ್ನ--ಪ್ರಪ್ರಯತ್ನ ಪರ್ವ
ಬಲಿತೊಡೆ ಮಾತ್ರ ಸಾಲ್ಗುಮೇ ?
ಜೀವನ ಸತ್ಯಂ ಪರಿಶೋಧನಂ.
ಕಾರ್ಯಕಾರಣ ನಿಬಂಧಂ ನಿತ್ಯ ಘನಂ :
ಸ್ವಕಪೋಲಕಲ್ಪಿತವಲ್ಲವು.
ಸ್ವೋಪಜ್ಞತೆಯ ಘನ ಮುದ್ರೆಯಿಂದೆ
ಪ್ರಜ್ವಲಿತವಾ ಲೋಕ ಸಂಪತ್ತಿ.
ವೇದ ಋಷಿಗಳೊರೆದ ವೇದ ವೇದಾಂತಗಳ್
ಲೋಕದಲಿ ವಿಜೃಂಭಿಸಿವೆ
ಪ್ರಜ್ಞಾನದಾನಿಗಳ್ ತಾವಾಗಿ !
ಪ್ರಾಗ್ ಜ್ವಾಲಿತಾತ್ ಪ್ರದೀಪಾದ್ ಹಿ
ದೀಪಿಕಾ ದೀಪ ಸಂತತಿ ಃ
ಇದಂ ಕಾರ್ಯ ಕಾರಣ ವತ್
ಯೋಚಿಸಿ ಯೋಚಿಸಿ ಪರಿಭಾವಿಸಿ ನೋಡೆ,
ಸತ್ಯ ಸೌಂದರ್ಯವೋ ?

→

ಸೌಂದರ್ಯವೇ ಸತ್ಯವೋ ?
Beauti is truth……
ಸತ್ಯ ಸೌಂದರ್ಯಗಳೆರಡೂ ಹೃದಯದೊಳಗೋ ?
ಅಲ್ಲವೆಂದೊಡೆ
ಸತ್ಯ ಸೌಂದರ್ಯದ ನೆಲೆ ಆವುದು ?
ದಿವ್ಯರಸದೃಷ್ಟಿಯ ಕಕ್ಷೆಯೊಳ್ ಕಾಂಬುದು
ಸತ್ಯ ಸೌಂದರ್ಯವೋ ?
ಪರಮಾತ್ಮ ಸೌಂದರ್ಯವೋ
ಇನ್ನೆಬರಂ ಅರಿಯದಾದೆನ್ ಭಗವನ್ !
ಜ್ಞಾನ–ಪ್ರಜ್ಞಾನಗಳ ಮೂಸೆಯಲಿ
ಪೊದಳ್ವುದು ಸತ್ಯ ಸೌಂದರ್ಯ ಮಾತ್ರ ಕಣ !
ಕವಿ ಕೃತಿಗೆ ನಿಲುಕದ ಪರಮಾತ್ಮ
ನಿನಗೆ ನಮೋ ನಮಃ !
Let my ears hear thy Lilas

— o —

ಶಾಂತಿ

ಮಹಿಳೆಯರ್ ವಿಶ್ವದ
ಎಲ್ಲಾ ವಿಚಾರಗಳಲಿ
ಪ್ರತಿನಿಧಿಸಿದೊಡೆ ಸಧ್ಯ
ಯುದ್ಧ ಕೊನೆಗೊಳ್ವುದು
ಶತಸ್ಸಿದ್ಧ ಎನಲ್ ಹೆಮ್ಮೆ ಕಣ !
ಈ ಜಗಕೆ ಸ್ತ್ರೀ ನೀಡುವ
ಅದ್ಭುತ ಕಾಣಿಕೆಯೆ ಶಾಂತಿ.

— o —

ಚಂದ್ರಮ

(ಭೋಗ ಷಟ್ಪದಿ)

ಬನದ ತಳಿರ ಸೊಗದ ಸುಧೆಯ
ಮನದಿ ನೆನೆದು ಹರುಷ ತುಂಬಿ
ನೆನೆಯೆ ಗಗನ ತಲದಿ ನಗುತಲಿದ್ದ ಚಂದ್ರಮ
ಬನದ ಗಾಳಿ ಬೀಸಿ ವೀಸಿ
ತನಗೆ ತಾನೆ ಸುಳಿದು ಸುಯ್ದು
ತನನ ತಾನ ಹಾಡೆ ತೊಳಗಿನಿಂದ ಚಂದ್ರಮ.

ಹರುಷದಿಂದ ಮುಗಿಲ ಏರಿ
ಕಿರಣ ವರ್ಷ ಸೂಸೆ, ಹರ್ಷ
ಧಾರೆ ಹರಿದ ತೆರದಿ ಶಾಂತಿ ರೂಪಿ ಚಂದ್ರಮ
ಕೋಟಿ ಕೋಟಿ ತಾರೆ ಇಣಿಕಿ
ಸರಸದಿಂದ ಮಿನುಗುತಿರಲು
ಮುಗಿಲ ಮಾಲೆ ಸರಿಸಿ ನಲಿದು ಬಂದ ಚಂದ್ರಮ.

— ೦ —

ದೇಶಸೇವೆ

ಈಶ ಸೇವೆ ಎಂದು ದೇಶಸೇವೆಗೈಯ್ಯುವ
ಬನ್ನಿರೈ ಬನ್ನಿರೈ ಎಲ್ಲ ಮಾನ್ಯರೆ !

ಮತಿಮತಿಯಲಿ ಕಿಲುಬು
ಹತ್ತಿ ಜಾನ ಗೇಡಾಗಿ
ಬಲಿಯುತಿರೆ ಬಡತನ
ನೋಡಿ ತಾಳ್ವಿರಾ ?

ದುಃಖದುಗುಡ ನಿತ್ಯ ಹೆಚ್ಚಿ
ಸ್ವಾರ್ಥಪರರ ಕಿಚ್ಚಿನಲಿ
ಬೇಯುತಿರೆ ಬಡಜನತೆ
ನೋಡಿ ತಾಳ್ವಿರಾ ?
ಸ್ವತಂತ್ರ ಭಾರತದಲಿ
ಸ್ವತಂತ್ರ ಗತಿಗೆಟ್ಟು
ನರಳುತಿರೆ ಜಡಮತಿಯು
ನೋಡಿ ತಾಳ್ವಿರಾ ?

— ೦ —

ಪೇ ಕಮಿಷನ್ ವರದಿ ಕುರಿತು

ವರ್ತಮಾನೇನ ಕಾಲೇನ
ವರ್ತಯಂತಿ ವಿಚಕ್ಷಣಾಃ

ರಾಷ್ಟ್ರೀಯ ಶ್ರಮಿಕ ವರ್ಗಂ ದುಡಿದು ಬೆವರ್ನೀರ್
ಬಸಿದು ಕರ ಕಟ್ಟುತಿದೆ ಸ್ತ್ರೀಪುರುಷರೊಗ್ಗಿನಿಂ.
ರಾಷ್ಟ್ರದೇಳ್ಗೆಯ ನೇಮದಿಂ ಸಂತಸರಸಮಂ
ಮೊಗೆದುಂಬುವ ಸದ್ ಆಶಯದಿಂದೆ ದಿನದಿನಂ.
ಸ್ವತಂತ್ರ ರಾಷ್ಟ್ರದ ಮಿಣಿವಿಡಿದೆಳೆಯಲೆಲ್ಲ
ಕಡೆಯೊಳ್ ಸಮತೋಲನಮಿರ್ಪೊಂದು ಪ್ರಣಾಲಿಕೆ
ರಾಷ್ಟ್ರೀಯ ಕಾಂಗ್ರೆಸ್ಸಿನ ಉದ್ದೇಶವಾಗಿರೆ
ಇದೇನೀಪರಿ ದುಂದುಗಾರಿಕೆ ಪ್ರಭುತ್ವದ
ವಿಷಚಕ್ರದಲಿ ? ಪಚ್ಚ ಪಸುರಪ್ಪಿ ಬಾಳ್ ನೆರೆ
ನಳನಳಿಸಿ ದಾರಿದ್ರ್ಯ ದೇವಿಯಂ ರಾಷ್ಟ್ರಗಡಿ
ದಾಂಟಿಸುವ ಮಹದಿಚ್ಛೆಯಿರೆ ದುರ್ವ್ಯವಹಾರಮೆ
ರೋಚಕಂ ರಾಷ್ಟ್ರದಲಿ !
ಮಹಾತ್ಮ ಗಾಂಧೀಜಿಯ
ನೇತೃತ್ವದಲಿ ಶಾಂತಿಯಿಂ ಸತ್ಯ ವ್ರತದಿಂ
ಹೋರಾಡಿ ಸ್ವಾತಂತ್ರ್ಯ ಗಳಿಸಿದಾ ರಾಷ್ಟ್ರೀಯ
ಸಂಸ್ಥೆ ಕಾಂಗ್ರೆಸ್ಸಿನ ಧ್ಯೇಯಧೋರಣೆಗಳೆ ಬೇರೆ
ಪ್ರಭುತ್ವದ ವಿಚಾರ ವಿಹಾರವೆ ಬೇರೆ ಮೇಣ್
ಗಾಂಧೀಜಿ ಪ್ರಣೀತ ತತ್ವ ಸಾರವೆ ಬೇರೆ ;
ಎನಲ್ ಯೋಚಿಸು ಮನವೆ ! ಬಡಮಕ್ಕಳ ಕೈತುತ್ತು
ಕಸಿಯದೆಯೆ ರಾಷ್ಟ್ರರಥಮಂ ಮುಂದೆಳೆವ ಸಾಸ
ಕಾರ್ಯಂಗೈದು ಜಗತ್ತಿಗೆ ಮಾದರಿಯಪ್ಪವೊಲ್
ಸತ್ ಶಾಂತಿ ಅಭಿವೃದ್ಧಿಗೆ–ದರಿದ್ರ ನಾರಾಯಣ →

ಸೇವೆಗೆ–ಉದಾತ್ತ ಧ್ಯೇಯೋದ್ದೇಶಗಳ ಪರಮ
ಪಾಲನೆಗೆ ಮಹತ್ ಸಾಧನಾಶೀಲತೆಯಲ್ಲದೆ
ಬೇರುಂಟೆ ? ರಾಷ್ಟ್ರೀಯ ಕಠಿಣ ಪರಿಸ್ಥಿತಿ ಕಂಡು
ಕಂಡು ಅರಿತರಿತು ದಾರಿದ್ರ್ಯಮಂ ಇನ್ನಿತಿನಿತು
ದಾರಿದ್ರ್ಯರೇಖೆಯಡಿಗೆ ತಳ್ಳುವ ಅನ್ಯಾಯ
ಅನೀತಿಗಳಿಗಿಂಬುಕೊಡಲ್ ಮನವೆಂತು ಸಂತು ?
ರೀತಿನೀತಿಗಳ್ ಜಗಂ ಮೆಚ್ಚುವನ್ನ, ಆತ್ಮಂ
ಮೆಚ್ಚುವನ್ನ ಸದ್ ಆಚಾರಮಿರ್ಕು ಪ್ರಜಾ
ಸರಕಾರದೊಳ್. ದಾರಿದ್ರ್ಯ ದೇವತೆಯಂ ಜಡಿ
ಕುಟ್ಟಿ ಬಡಿದೋಡಿಸಲ್ ದೀನ ದರಿದ್ರರಿಂಗೆ
ಅನ್ನ ವಸ್ತ್ರ ವಸತಿಗೆ ದಾರಿಗೈಯಲ್ ನಿಚ್ಚ
ಶ್ರಮಿಸಿದೊಡದೆ ದೈವ ಪೂಜೆಯಕ್ಕು. ಸಗ್ಗಕೆ
ಸೋಪಾನಮಕ್ಕು. ಅಂತುಮಲ್ಲದೆ, ರಾಷ್ಟ್ರೀಯ
ಸರಕಾರದ ಗದ್ದಿಗೆಯ ಅಭಿಷಿಕ್ತ ಪೀಠದಿ
ಮಂಡಿತ ಪ್ರಾಧಿಕಾರವರ್ಗಕೆ ಮಾಸಿಕ ಪಗಾರ
'ಒಂಬತ್ತು ಸಹಸ್ರ' ರೂಪಾಯಿಯ ಹೆಗ್ಗಂಟು !
ಮೇಣತಿ ಸಹಸ್ರಸಹಸ್ರಾನು ಸಂಖ್ಯೆಯಲಿ ಉಪ
ಪಗಾರದ ದಂಥೆ ಅಧಿಕಾರಿಗಳಲಿ ಎಂಬೊಡೆ
ಮುಗಿಯಿತೇಂ? ದರ್ಪಗುಳಿತನ ತಿಂಬುದು ಪ್ರಜಾ
ಕೋಟಿಯಂ, ಇದಂತುಂ ಅನ್ನೆಯದ ಮೋಜು ಕಣ !
ಹಾ ! ಅನೀತಿ ಶ್ರಮಿಕರ ತುತ್ತಿಗೆ ನಿಜ ಮಿತ್ತು !
ಸುಜ್ಞಾನಮೆ ಅಜ್ಞಾನಕೆರವಾದೊಡೇಂಗತಿ ?
ಇದಂ ತುಲನೆಗೈದು ಪ್ರಜಾ ಪ್ರಭುತ್ವದ ರೀತಿ
ನೀತಿಗಳ ಒರೆಗಲ್ಲಿಗೆ ತೀಡಿ ತಿಳಿ ಮನವೇ !
ಅಂದಿಂದಿಗುಂ ಮುಂಬರಿಯುತಿರ್ಪ ದುರ್ನೀತಿ
ದುರ್ಯೋಜನೆಗಳಿಂ ಕಡುದಾರಿದ್ರ್ಯದೇವಿಗೆ
ವರಪೂಜೆ ರಾಷ್ಟ್ರದೊಳ್ ! ಲೋಕಪ್ರಜ್ಞೆಯುಮುಳ್ಳ →

ಪ್ರಾಧಿಕಾರಂ ರಾಷ್ಟ್ರದಾದ್ಯಂತ ನುಂಗುತಿರೆ
ಶ್ರಮಿಕರ್ ತೆತ್ತ ಭಾಗಶಃ ಕರ ದ್ರವ್ಯವಂ.
ಇನ್ನೆಲ್ಲಿಯ ದಾರಿದ್ರ್ಯ ನಿವಾರಣೆ ರಾಷ್ಟ್ರದಿ ?
ಪ್ರಾಧಿಕಾರ ವರ್ಗಕೆ ಮೂರರಿಂದೈದು ಸಹಸ್ರ
ಹಣಮಿತ್ತೊಡೆ ಸಾಲ್ಗುಂ ; ಇದೇ ಪೆರ್ಚಳಂ ಬಡ
ಭಾರತಕೆ ಎನಲ್ ಇಂ ಅಂತಪ್ಪ ಭಾರಮಂ
ಎಂತು ಭರಿಸುವುದೊ ಪರಿಭಾವಿಸಿ ನೋಡೈ ಹೇ,
ಪ್ರಜ್ಞಾನ ಮನವೆ ! ಇದನರಿತು ಬುದ್ಧಿ ಮಾನ್ಯರ್
ಸುಮ್ಮನಿರ್ದೊಡೆ ಮೌನಂ ಸಮ್ಮತಿಗೆ ದಾರಿ ಕಣ !
ಎಲ್ಲರೊಗ್ಗಿನಲಿ ಖಂಡಿಸಿ ತುಂಡಿಸಿದೊಡೆ ಬಡ
ಭಾರತಂ ಎಚ್ಚತ್ತು ಕೊಳ್ವುದೈ ಮೈ ಕೊಡವಿ !
ಬಡ ಶ್ರಮಿಕರ್ ಒಂಭತ್ತು ಸಹಸ್ರ ರೂಪಾಯಿ
ಕಾಂಬೊಡೆ ಎನಿತು ಕಾಲ ಬೆವರಿಳಿಸವೇಳ್ಕುಮೊ
ಅಪನಿತು ಯೋಚಿಸಿ–ಪರಿಭಾವಿಸಿ ಒಮ್ಮನದೆ
ವಿರೋಧಿಸಿರೈ ರಾಷ್ಟ್ರದಾದ್ಯಂತ ! ರಾಷ್ಟ್ರದೊಳ್
ಇನಿತೊಂದು ಏರು ಪೇರು ಸಲ್ಲಂ ಮೇಣ್ ಮಹಾ
ಪ್ರಭುತ್ವದ ಜಲಡಿಯಲಿ ಸೋರುತಿಹ ದ್ರವ್ಯವೇಂ
ಅಲ್ಪಮೇ ? ಬಡ ಜನತೆಯು ಕಿರುತುತ್ತಿನ ಚೀಲಕೆ
ಕನ್ನ ಹಾಕುವ ಪೇ ಕಮಿಷನ್ ವರದಿಯುಂ ಸೆಲೆ
ಸಿದ್ಧಪಡಿಸಲ್ ಕೂಡುತಿರ್ದ ಭೂಪತಿ ರಂಗರ
ಸಭಾ ಕಾರ್ಯಕಲಾಪಗಳೆನಿತೊ ! ಮತಿ ಮಾನ್ಯರ್
ತಿಂದುಂಡು ನಲಿನಲಿವ ಮೋಜಿನಾಟಕೆ ನಿಚ್ಚ
ಕಾಂಚಾಣಂ ಕಾರ್ಯಸಿದ್ಧಿ ಎಂಬುದೆ ಚಿರ ಸತ್ಯ.
ಎಲ್ಲೆಡೆಯು ಕುಶಾಗ್ರ ಮತಿಗಳ್ ಕಣ್ತೆರೆದು ನೋಡಿ
ಪರ್ಯಾಲೋಚಿಸಿದೊಡೆ ಸ್ವಾರ್ಥಪರರ–ವಿಚಾರಮತಿ
ಹೀನರ ಕುಪಥಕೊಂದು ಮಾರೊಡ್ಡು ! ಮೇಣ್ ಈ
ಭೂಪತಿಗಳ್ ಮನಮುಟ್ಟೆಗೈದಪರೇಂ ಕೆಲಸ →

ಕಾರ್ಯಗಳ್ ? ಕಾಫಿ, ಚಹ, ಮದ್ಯ, ಮಾದಕ, ಬೀಡಿ
ಸಿಗರೇಟುಗಳ ದುರ್ವ್ಯಸನಿಗಳ್ ಪೊಳ್ತು ಕಳೆವರ್
ನೋಡದಿಂ. ಇದುಂ ಸಾಮಾನ್ಯಮೆಂದೆಲ್ಲರುಂ
ಪರಿಗಣಿಸಿ ಕೈಬಿಡೆ ಅಜ್ಞಾನಂ ಸುಳ್ಳಕ್ಕು ;
ಅಪರಾಧಮಕ್ಕು ! ಹಾ, ಸ್ವತಂತ್ರ ಭಾರತದಲಿ
ಈ ನತದೃಷ್ಟ ಪರಿಪಾಡು ಅಳಿದಲ್ಲದೆಲ್ಲಿಯು
ಸುಖ ಜೀವನಂ ?

ಓ ಇದು ಮಾತ್ರಮೆ ಎಲ್ಲೆಡೆಯುಂ
ದುಂದು ವೆಚ್ಚ ; ಮೋಜುಗಾರಿಕೆಯ ಮಾಪೂರ !
ಇಂದಿನೀ ಪ್ರಭುತ್ವಂ ಅಂದಿನಾಂಗ್ಲರ ಮಹಾ
ಪ್ರಭುತ್ವಕೆ ಹೆಗಲೆಣೆಯೆನಲಕ್ಕು. ಬಡತನವ
ಹಿಂಗಿಪ ಸಂಯೋಜನೆಯಿಲ್ಲಂ. ಮನೋ ವಿಕಾಸ-
ಆತ್ಮ ವಿಕಾಸಗಳ ಲಕ್ಷಣೀಕರಣ ಸಂಜೀವನ !
ಸ್ವತಂತ್ರ ಭಾರತದ ನಾಲ್ಕು ದಶಕಗಳ ಪ್ರಜಾ
ಪ್ರಭುತ್ವದಾಳ್ವಿಕೆಯುಲಿ ಕಾಂಬುದು ಸಿರಿತನದ
ಸೊಮ್ಮಿಗಿಂ ಬಡತನದ ಸಂಕಷ್ಟ ಪ್ರಧಾನಂ !

ಇಂದು ವಿಜ್ಞಾನ ಸುಜ್ಞಾನ ಪರಿಜ್ಞಾನಗಳ್
ಪಿಡಿದ ದೂರ ಮಾರ್ಗಯೋಗದಲಿ ಸಿರಿತನ ಮುಂದೆ
ಮುಂದೆ ಸಾಗುತಿರೆ ಬಡತನದ ಭಾರೀ ಲಾಂಗೂಲ
ಸಾಗುತಿದೆ ಹಿಂದೆ, ಹಿಂದೆ ! ರಾಷ್ಟ್ರೀಯ ಏಳ್ಗೆಯ
ಮಾನದಂಡಂ ಅಳೆವುದು ಸಿರಿವಂತಿಕೆಯ ಸಿರಿ
ಕಿರೀಟದ ಮೇಲಿನಿಂದಲ್ಲವೊ, ಕಡುಬಡತನದ
ಕೊಟ್ಟಕೊನೆಯ ಜೋಪಡಿಯಿಂ ಕಾಣಿರೊ. ಜಗದಲಿದು
ಬುದ್ಧಿ ಮಾನ್ಯರೊಪ್ಪುವ ಮಾನಕಣ ! ಆಪನಿತು
ಯೋಚಿಸಿರೈ ಭಾರತೀಯ ಜನ ಜೀವನವಳೆದು-
ಸುರಿದು ನೋಳ್ಪ ತೆರದೊಳ್ ! ಬಡತನವನ್ನೆ ಅತೀವ
ಬಡತನದ ರೇಖೆಯುಡಿ ತಳ್ಳುತಿದೆ ಪ್ರಭುತ್ವಂ ! →

ಅಧಿಕಾರ ಪೀಠಸ್ಥ ಬಹುತೇಕ ಕಿರಿಮನದ
ಹುಂಬರ್ ಮನಮುಟ್ಟಿ ಗೈಯ್ವರ್ ಕಜ್ಜಮನೆಂಬೆಯ ?
ನಿಚ್ಚ ಮುದ–ನೋದ, ಮದ–ಮಾತ್ಸರ್ಯ, ಹರಟೆ-ಅತಿ
ಸೋಮಾರಿತನದ ವಾಂಛೆಯಲಿ ಮುಳುಗಿರ್ಪರ್ !
ದಾಷ್ಟೀಕತನದ ವರ ಕಜ್ಜಮಂ ಕಡೆಗಣಿಸಿ
ತಿಂಗಳ ಕೊನೆಯಲಿ ಸಂಬಳಮೆಣಿಸಿ ನಡೆದಪರ್ !
ಇಂತಪ್ಪ ಅಯೋಗ್ಯರ ಜೇಬಿಗೆ ವರ ದ್ರವ್ಯದ
ಹೆಗ್ಗಂಟು ! ಅಲ್ಲದೆ ಕೈ ತುಂಬ ಗಿಂಬಳದ ಹೊಳೆ
ಹರಿವುದನರಿಯದವರಾರ್ ? ಜಗದೊಳ್ ಇದನರಿತ
ಬೌದ್ಧಿಕ ಪರಮ ಶಕ್ತಿ ಏರು ಪೇರಿನ ಮೌಲ್ಯ
ಮಾಪನಗೈಯದೆ ದುರವಸ್ಥೆಗೆ ಕಾರಣಂ
ತಾನಾಗಿಹುದೆಕೊ ಆನರಿಯೆಂ.

ಶ್ರಮಿಕ ಜೀವ

ಕೋಟಿಗೆ ಮೇಣ್ ಸ್ತ್ರೀಜನಸಾಗರಕೆ ದುರ್ಭರ
ಬಾಳಿನ ಹಿರಿ ಕಗ್ಗಂಟು. ನಿಚ್ಚ ಸೋಮಾರಿ
ಅಧಿಕಾರಿಗಳ್ ನೋದದಿಂ ಮೆರೆಯುತಿರೆ ದೀನ
ದರಿದ್ರರ್ ಕರುಣೆಯಿಂ ನಿಷ್ಠೆಯಿಂ ಸರಿಪಡಿಸಿ,
ವರ್ಷೇವರ್ಷೇ ಉಳಿತಾಯದ ಹಣದಿಂದನಿತು ಬಡ
ಜನರ ಅನ್ನವಸನ ವಸತಿಗೆ ದಾರಿದೋರುತೆ
ಪುಣ್ಯ ಕಟ್ಟಿಕೊಳ್ವುದು ರಾಷ್ಟ್ರೀಯ ಏಳ್ಗೆಗೊಂದು
ಬಿತ್ತು. ಮೇಣ್ ಕವಿ ಹೃದಯದ ದುಃಖಪೂರಿತ
ನಿಟ್ಟುಸಿರಿಗೊಂದು ಕಿರು ಮಾರೊಡ್ಡು ಕಾಣಿರೋ.
ಮೊಲ್ಲೆಬನದ ಮಲ್ಲಿಕಾವೇಶಿನಿಯ ಮನವಿಯಂ
ಮಾನಿಪರಿಲ್ಲವೀ ಜಗದೊಳ್ ಎಂಬುದನರಿದು
ನುಡಿಯುತಿಹೆ ಒಡಲುರಿಯ ತಾಳಲಾರದ ಪರಿಯಲಿ.

— ೦ —

God sees the truth but....

ಸತ್ಯದೂರವಾದ ಸುದ್ದಿ
 ಆತ್ಮಶ್ರೀವಿದೂರತೆಯು
ಪಡಿಯಚ್ಚು ಎಂದೊಡೆ
 ಅಲ್ಲವೆನ್ನದಿರು ಮನವೇ !
ಏಗಳುಂ ಕಾದು ನೋಳ್ಪ
 ಸಹನೆಗೆ ಕಿಚ್ಚಿಡದಿರ್ !
ಸತ್ಯವಿದೂರತೆಯು
 ಮಿಥ್ಯದರಮನೆ ಕಟ್ಟದು
ಸತ್ಯ ಸೌಂದರ್ಯವಲ್ಲದೆ
 ಬೇರೊಂದಿಲ್ಲ ಜಗದಲಿ !

God sees the
 truth but....

ಸ್ವಭಾವ

ವೇಶ ಭೂಷಣಂಗಳಿಂದೇಂ
 ಬಪ್ಪುದು ಜೀವನದೊಳ್ !
ಆಂತರಂಗಿಕ ವ್ಯಾಪಾರದ
ಕನ್ನಡಿ ಹಿಡಿಯುವೇಂ ನಿಚ್ಚ
 ನಿಜ ಸ್ವರೂಪಕೆ ?

— ೦ —

ಸ್ವಾರ್ಥದ ಪರಮಾವಧಿ
ತುಂಬಿದೆದೆಯ ಬಂಜರು ಭೂಮಿಯಲಿ
ಮೂಡಿತೊಂದು ಅದ್ಭುತ ಅಗ್ನಿದಿವ್ಯ !
ಅರ್ಥಲಾಭದ ಪಸುರಲ್ಲ,
ಸ್ವಾರ್ಥತ್ಯಾಗದ ಪರಮಾರ್ಥ
ಸಂಪದಂ....ಸಂಪದಂ !
ಜೀವ ಸ್ವರ್ಗದ ಸೋಪಾನವೇರಿದಬಳಿಕ,
ಆಶಾಪಾಶಗಳ ಕೊಂಡಿ ಕಳಚಿ
ಕಾಲಡೆಶೆ ತಳ್ಳಿತು ಮಹದೈಶ್ವರ್ಯವಂ !
ತಾನಾಗಿ...ತಾನಾಗಿ.

— ೦ —

ಬ್ರಿಟನ್ ರಾಣಿ

ಬ್ರಿಟಿಷ್ ಪ್ರಾಂತ್ಯದಲಿ
ರಾಣಿ ಎಂದೆಂದಿಗೂ ಮಹಾರಾಣಿಯೇ !
ಎಲ್ಲಾ ಮಹಿಳಾಮಣಿಯರಿಗಿಂತ
ಅತ್ಯಂತ ಶ್ರೀಮಂತ ಮಹಿಳಾ ಮಣಿ
ಎಂದೆಂಬ ಖ್ಯಾತಿ ಇರ್ಪುದೆಂದಿಗೂ.
ರಾಣಿ ದ್ರವ್ಯ ಸುಂದರಿ
ಮಾತ್ರವಲ್ಲ ಕಾಣಿರೋ
ಸೌಜನ್ಯ ಸುಂದರಿಯೂ ಹೌದು !

— ೦ —

ಶರೀರ ನಿರಪೇಕ್ಷಸ್ಯ
  ದಕ್ಷಸ್ಯ ವ್ಯವಸಾಯಿನಃ ।
ಬುದ್ಧಿಃ ಪ್ರಾರಬ್ಧ ಕಾರ್ಯಸ್ಯ
  ನಾಸ್ತಿ ಕಿಂಚನ ದುಷ್ಕರಮ್ ॥

ಓವೋ, ನೋಡಾ ಉತ್ತರ ಭಾರತದ ಪುಣ್ಯವೆ
ಪುಣ್ಯಂ ! ನದಿ ನೀರು ಸಂಮೃದ್ಧವಿರೆ ನಿಚ್ಚ
ಜೀವನಂ ನಿರ್ಮಲಂ, ಸುಖಭೋಗ ಪ್ರವಿಷ್ಟಂ.
ಇತ್ತಲಿತ್ತಲ್ ದಕ್ಷಿಣ ಭಾರತದಲಿ ಅತೀವ
ಜಲಕ್ಷಾಮ ! ಅನುಭವಿಸಲಾಗದ ಜಲಕ್ಷಾಮ !
ನದಿಗಳ್ ವಿರಳ ಮೇಣ್ ವರುಣನವಕೃಪೆಯಿಂ
ನದನದಿಗಳ್ ಬತ್ತಿ ಜಲಕ್ಷಾಮ ಘೋರಾತಿಘೋರ !
ಅನ್ನಕ್ಷಾಮಕ್ಕಿಂತಲ್ ಕಠಿಣಂ ಜಲಕ್ಷಾಮಂ !
ಸುಡು ಬೇಸಗೆಯ ರಣಬಿಸಿಲಲಿ ಬಳಲ್ದ ಬೃಹದ್
ಜೀವ ಕೋಟಿಯಗತ್ಯಂ ಈ ನದ ನದಿಗಳ್
ಪೂರೈಸವು ಎನೆ ಜೀವನೀಯ ಗೋಳು ಬಲ್ಲವರೆ
ಬಲ್ಲರ್. ಇಂ ಪ್ರಯತ್ನದಿಂ ಗೆಲ್ಲದೆ ಗತಿಯಿಲ್ಲಂ.

ಭಾರತದ ಉತ್ತರೀ ತಟದಲಿ ನದ ನದಿಗಳ್
ಉಕ್ಕುಕ್ಕಿ ಭೋರ್ ಭೋರನೆ ಭೋರ್ಗರೆದು ನುಗ್ಗಿ
ಊರು ಕೇರಿಗಳಂ ತೊಳೆತೊಳೆದು ಜನತತಿಯಂ
ಕಂಗೆಡಿಸಿ ಪ್ರಾಣಹರಣ–ದ್ರವ್ಯಹರಣ ಗೈದು.
ಜನರ ಕಣ್ಣೀರ್ ಕರೆಸಿ ಹಿರಿನಷ್ಟದ ಬಣಂಬೆ-
ಯೊಟ್ಟಿಯೊಟ್ಟಿ ದಾರಿದ್ರ್ಯ ದೇವತೆಯ ತಾಂಡವ →

ನೃತ್ಯರಂಗವೇರ್ಪಡಿಸಿ ಸರ್ರನೆ ಇಳಿದಿಳಿದು
ಸಮುದ್ರವ ಸೇರ್ವ ಹಮ್ಮಿನ ಬಿಮ್ಮು ನೋಡಿರೋ !
ಏಂ ನದಿಗಳುಬ್ಬರಂ ? ಏಂ ಪ್ರಳಯದಬ್ಬರಂ ?
ಏಂ ಜನದನಗಳ ಪ್ರಾಣ ನಷ್ಟದ ರಣಗೋಳು !
ಹಾ, ನಮ್ಮವರಿನ್ನುಂ ಪ್ರಕೃತಿಯ ಪ್ರಚ್ಛನ್ನ
ದಾಸರಿರೆ ಸಾಧನೆಯ ರಂಗ ಅಣುತೃಣಕ್ಕಿಂತ
ಕಿರಿದು ! ಪ್ರಕೃತಿಯೊಡನೆ ಹೋರಾಡಿಗೆಲ್ಲದೆ
ಬದುಕಿಗೆಲ್ಲಿಯ ಸಿರಿನೆಲೆ ? ಹೋರಿದೊಡೆ ಗೆಲ್ಲವೆ !
ಮಹಾ ನದಿಗಳ್ ಊರು ನಾಶಗೊಳಿಸಿ ಸಮುದ್ರ
ಸೇರ್ವುದಂ ನೋಡುತಿರೆ ಈ ಬವಣೆ ತಪ್ಪದು ಕಣ !
ಭಾರತೀಯ ವಿಜ್ಞಾನವೆಚ್ಚತ್ತುಕೊಳ್ಳದೆ
ಎಲ್ಲಿಯ ಸತ್ ಪರಿಣಾಮವ್ಯೆ ಈ ಭವದಿಯೊಳ್ !
"ಧಿಯೋ ಯೋನಃ ಪ್ರಚೋದಯಾತ್" ಎಂದುದು ವೇದ.
ವಿಜ್ಞಾನ ರೀತ್ಯ ಉಗ್ರನದಿಗಳಿಗಲ್ಲಲ್ಲಿ ಪೆರ್
ಕಾಲ್ವಾಯಿಗೈದು ಜಲಹರಿಸಿ ಝರಿಯೊಲ್ ದೂರ
ಒಣನೆಲದಿ ಬಾವಿ ಕೆರೆ ಕಟ್ಟೆಗಳಂ ನಿರ್ಮಿಸಿ,
ವ್ಯವಸಾಯೋತ್ಪನ್ನಗಳಿಂಗೆ ಉಪಭೋಗಿಸಿ
ಅಪನಿತು ಬಳಸಿಡೊಡೆ ಎನಿತೆನಿತೊ ಮಾರೊಡ್ಡು !
ಜಲವುಕ್ಕಿ ನೆರೆಕೇರಿಗಳ ತೊಳೆತೊಳೆದು ಪಾಳ್
ಗೆಡಿಪ ಮುನ್ನ ಮೇಣ್ ಪರಿದೋಡಿ ಸಮುದ್ರವಂ
ಸೇರ್ವಮುನ್ನ ಅಪನಿತು ನೀರ್ ಬಳಸಲಕ್ಕು.
ಇಂಗ್ಲಿಷ್ ಕಡಲ್ಗಾಲುವೆಯುಂ ಮಿಾರ್ವ ಕಾಲ್ವಾಯಿ
ದಾಕ್ಷಿಣಾತ್ಯ ದೇಶಗಳಿಗೆ ಪರಿದೊಡೆ ಇಕ್ಕೆಲಕ್ಕು
ಕ್ಷೇಮವಕ್ಕು ; ವಿಜ್ಞಾನ ವಿಶೇಷಮುಕ್ಕು ಕಣ !
ಕಾಲ್ವಾಯಿ ಕೈಕೊಂಬ ನಿರ್ಧಾರಂ ಬಲ್ವಲಗೊಳ್ಳಲ್
ವೈಜ್ಞಾನಿಕ ನೆಲೆಯೊಳ್, ಜನ ಶಕ್ತಿಗೇಂ ಇನಿತು →

ಕೊರವಿಲ್ಲಂ. ಕರುನಾಡ ದಾಕ್ಷಿಣಾತ್ಯವಲಯಂ
ಅತೀವ ಜಲ ಕ್ಷಾಮದ ಭಂಗ ಬವಣೆಯಿಂದಲಿ
ಬೆಂದು ನರಳುತಿಹುದಕಾಣದೇಂ ವಿಜ್ಞಾನ ?
ನಭೋದ್ದೇಶದಿ ಉರಿಯುತಿರೆ ಸುಡುವಿಸಿಲ್ : ಕೆಳಗೆ
ನೀರಿನ ತನಿಯಿಲ್ಲಂ. ಸಂಕಟದ ರಣಗೋಳು !
ವರ್ಷೇ ವರ್ಷೇ ವರುಣನವಕೃಪೆಯಿಂ ನೊಂದು
ನೋವುಂಬುದೆ ಬಾಳಿನ ದಿನಗೂಳು ! ಸ್ಥಿತಿಗತಿ
ಇಂತಿರೆಯಿರೆ ಉತ್ತರದ ಜಲರಾಶಿಯು ದಕ್ಷಿಣ
ವಲಯಕೆ ಬಲವಂದು ಹರಿಸಿದೊಡೆನಿತೋ ಲೇಸು !
ಉತ್ತರದ ನದೀ ವಾಹಿನಿ ದಕ್ಷಿಣ ನದಿಗಳಿಗೆ
ಜೀವಂಬರಿಸಿ, ಅಖಿಲ ಬಡ ಜೀವಜಂತುಗಳ
ದಾಹ ಮುಳಿಸೆ, ತಣ್ಣನೆಯ ತನಿಯುಗುವ ಜಲವಂ
ತರಿಸಿದೊಡೆ ವಿಜ್ಞಾನ ಜಗತ್ತಿಗೆ ಭಲೆ ! ಎನುವೆ.

— ೦ —

ಏಕೀಕರಣ

ಬೃಹತ್ ಜಗತ್ತಿನ ಅರ್ಥಾತ್
ಏಕೀಕರಣ ಮೇಣ್ ವಿಶ್ವವ್ಯವಸ್ಥೆ
ಪುನರ್ರಚನೆಗೆ ಅತ್ಯಗತ್ಯವಿಹ
ಆಧ್ಯಾತ್ಮಿಕ–ಧಾರ್ಮಿಕ-ನೈತಿಕ
ಪ್ರತ್ಯಕ್ಷ ಪ್ರಮಾಣಮೆಂದೊಡೆ
ಸ್ತ್ರೀಪುರುಷರ ಸರಿ ಸಮಾನತೆ ಕಣ !
ಮನಸೋಮನಃ ಪ್ರಾಣಸ್ಯಪ್ರಾಣಃ

— ೦ —

ಸೋಗು

ಗೇಣು ಹೊಟ್ಟೆಗಾಗಿ
ಹೇಸು ಸೋಗು ಹಾಕಿ
ಮೋಸ ಗೀಸ ಮಾಡಿ
ಹೊಟ್ಟೆ ಹೊರೆವರಯ್ಯಾ.

ಮೈ ಮುರಿದು ದುಡಿದುಂಡು
ಮಾನ ಉಳಿಸಿಕೊಳ್ಳದೆ
ಹುಸಿಯನಾಡಿ ಬರಿದೆ
ಹೊಟ್ಟೆ ಹೊರೆವರಯ್ಯಾ.

ದೇವನೆಮ್ಮ ಬದುಕು
ಹಸನು ಮಾಡೆ ಬುದ್ಧಿ
ಕೊಟ್ಟುದುದನು ಮರೆತು
ಹೊಟ್ಟೆ ಹೊರೆವರಯ್ಯಾ.

ಇಂಥ ಹೇಸು ಬದುಕು
ಇರುವ ಬದಲು ಸಾವು
ಲೇಸು ಎಂಬುದ ಮರೆತು
ಹೊಟ್ಟೆ ಹೊರೆವರಯ್ಯಾ

— ೦ —

ಭಾರತೀಯ ವಿಜ್ಞಾನ

ದ್ವಾರಂ ದ್ವಾರಂ ರಟಂತೀಯ
ಭಿಕ್ಷುಕಾಃ ಪಾತ್ರ ಪ್ರಾಣಯಃ!
ದರ್ಶಯಂತ್ಯೇವ ಲೋಕಾನಾಮ್
ದಾತುಃ ಫಲ ಮಿಾದೃಶಂ ||

ಭಾರತೀಯ ವಿಜ್ಞಾನ ಪ್ರಜ್ಞಾನದ ಕೂಸು !
ತರುಣ ಪೀಳಿಗೆ ವಿಜ್ಞಾನದ ಜ್ಯೋತಿಯಂವೆಳಗೆ
ಬಯಸೀ ಬಯಸೀ
ಪುರುಷಿನಿಂ ವಿಜ್ಞಾನವೇದಿಕೆಯೇರಿ
ನೆರೆ ಅಂಡಲೆದು, ಸೊಮ್ಮಳಿದು
ಸರಿ ನೆಲೆಯಂಗಾಣದಾಗೆ
ಕಲಿತು ಬಲಿತು ನಿಷ್ಣಾತರಪ್ಪ
ಎಳೆ ವಿಜ್ಞಾನಿಗಳ್ ತತ್ತರಿಸಿದರ್ ಮನಂಗೆಟ್ಟು
ತಮ್ಮ ಜಾಣಿಕೆಯಂ ಗುರುತಿಸದಿರೆ ಸರಕಾರ !
ಪ್ರಜ್ಞಾನ ನಿಧಿಗೆ ಉದ್ಯೋಗ ದಾರಿದ್ರ್ಯ
ಆರ್ಥಿಕ ದಾರಿದ್ರ್ಯ
ಮೇಣ್....ಮೇಣ್...
ಕಾರುಣ್ಯ ದಾರಿದ್ರ್ಯದ ಮೂಸೆಯಲಿ
ಸುಟ್ಟುರಿದು ಕರಿಮುರಿಯಾಗಿ ಶಾಂತಿದೂರಾಗಿ
ನೆಲೆ ಬೆಲೆ ತಪ್ಪಿ ತ್ರಿಶಂಖುವಿನೊಲ್
ಗಗನದಲಿ ಅತ್ತಿತ್ತ ಜೋಕಾಲಿಯಾಡಿ
ಗತಿಗೆಟ್ಟು–ಬಟ್ಟೆಗೆಟ್ಟು–ಬಾಳ್ಗೆಟ್ಟು
ಮ....ತಿ...ಗೆ...ಟ್ಟು

←

ಆತ್ಮಹತ್ಯ ಕೈಕೊಂಡು ಸ್ವರ್ಗರಾಜ್ಯದ
ಸ್ವರ್ಣದ್ವಾರವಂ ತಟ್ಟಿದರ್.!
ಭಾರತಮಾತೆ ಕಂಗೆಡುವೊಲ್ !
ಎಂಟು ಮಂದಿ....ಎಂಟು ಮಂದಿ !
ವಿಜ್ಞಾನಿ ಮಹೋದಯರ್ ಆತ್ಮಸಂಕಟದಿಂ
ಪಾರಾದರ್ ಸಗ್ಗ ಸುಧೆಯ ರಾಸಾನ್ನಮುಂಡು !
ನತದೃಷ್ಟ ವಿಜ್ಞಾನಿಗಳ ಒಂದೊಂದು
ಜೀವನವೂ ದುರಂತ ಬಾಳಿನ ವೈತರಣಿಯ ಮಹಾಪೂರ !
ದುರಂತ ಜೀವನ ಬಲ್ ಸಂಕಟಕಾರಕ ಕಣ !
ಇತ್ತೀಚಿನಾ ದಶಕವೊಂದರಲ್ಲಿಯೇ
ಭಾರತೀಯ ಕೃಷಿ ಸಂಶೋಧನಾ ಸಮಿತಿಯ
ಮೂವರು ಮಂದಿ ದುರ್ದೈವೀ
ವಿಜ್ಞಾನದ ಮಹಾ ಪ್ರಜ್ಞಾನ ಮಹೋದಯರ
ಜೀವನ ದುರಂತಂ ಸಂಭವಿಸಿತಲಾ
ಧೀಮಂತರ ಕಣ್ಮಂತೆ !
ಹಾ, ಅದರ ಮುಖ್ಯ ಕಾರಣಂ
ಸರಕಾರದ ಕುರುಡುಗಣ್ಣು ! ಮೆಳ್ಳೆಗಣ್ಣು
ಭಾರತದ ಕೃಷಿಕ್ಷೇತ್ರದ ದಿವ್ಯ ಬಡತನಕೆ
ಹೇಳಿ ಮಾಡಿಸಿದ ವಿಶಿಷ್ಟ
ಮಾರಣ ಹೋಮ ! ಮಾರಣ ಹೋಮ !

— ೦ —

ಸೌಂದರ್ಯ

ಸೌಂದರ್ಯ ಮಿರ್ಪುದು
ಶರೀರದಲ್ಲಲ್ಲ ಕಣ !
ಬಲು ದಿವಿನಾದ
ಶಾರೀರದಲ್ಲಿ ತಿಳಿಯೋ !

— ೦ —

ಮೃತ ಸಮುದ್ರ

ಕಾಲಗತಿಯ ಚಕ್ರ ಉರುಳ್ಚುತಿರಲ್
ಇತಿಹಾಸಮಂ ಕೊರೆಕೊರೆದು ಜನ್ಮ
ಜನ್ಮಗಳ ಅನುಬಂಧ ಬೆಳೆಯುತಲಿ ;
ಪ್ರಕೃತಿ ಸಿರಿದೇವಿಯ ಬಲ್ಮೆಯಿಂ
ಜೀವನೀಯ ಬಂಧಂ ಸುಂದರಂ !
ಇಸ್ರೇಲ್ ಮೋಣ್ ಜೋರ್ಡಾನ್‌ಗಳ
ಬಂಧಾನುಬಂಧಗಳ ನೋಂಪಿಯೋ
ಎನಲ್ಕೆ ಎರಡೂ ರಾಷ್ಟ್ರಗಳ ನಡು-
ವಣ ಪ್ರಾಂತದಲಿ ಮೃತವಾರ್ಧಿಯೆನೆ
ನೆಲೆಯೂರಿ ಸುರ ಸುಂದರ ತಾಣವ
ನಿರ್ಮಿಸಿದ ಅತ್ಯದ್ಭುತ ಪುಷ್ಕರಣಿ
ನೀನೈಸಲೆ ಈ ಜಗತ್ ತಂತ್ರದಲಿ ?
ಜೋರ್ಡಾನ್ ನದಿ ಮೋಣ್ ಮತ್ತಿತರ
ನದಿಗಳಂ ಸ್ವಾಹಗೈದು, ಕಡಲಲಿ
ನಾದಿನಾದಿ ಘನಿಸೆ ಲವಣರಾಶಿ
ನೀನಾದೆ ಮಿತ್ತು, ನಿನ್ನೊಡಲಿನಾ
ಜೀವಾಳಿಗಳಿಗೆ ! ಹೇ, ವಾರ್ಧಿಯೇ
ನಿನ್ನೊಳಿಲ್ಲ ಸಸ್ಯಾಳಿ ! ಮಾನವ
ಮುಳುಗೆ ನಿನ್ನಲಿ ಬೆಂಡು ಮೇಲೆದ್ದು
ತೇಲ್ವವೊಲ್ ತೇಲ್ವನೆನೆ ನೀನಂತು
ಅಚ್ಚರಿಯ ಸದ್ವಸ್ತು, ಭವದಿಯೊಳ್ !
Dead Sea-ಮೃತ ಸಮುದ್ರ
ಎಂದೆಲ್ಲ ಕರೆಯೆ ಲೋಕ ನಿನ್ನಂ

→

ಚಿಂತಿಸದಿರ್ ; ತವ ಧವಳ ಕೀರ್ತಿಯು
ಎಂದೆಂದಿಗು ಸತ್‌ಕೀರ್ತಿಯೇ ಕಣ !
ನೀಂ ದಿನಚರಿಯ ಕಾರ್ಯಕಾರಣಂ
ಅರಿತು ತುಷ್ಟಿಯಿಂ ಪುಷ್ಟಿಯಿಂ
ಮೈ ಘನೀಕರಿಸಿ ಮನಸೆಳೆವೆ ಅಹ,
ನಿಜ ಮಂತ್ರ ಮಾಯದಾಟದವೊಲ್ !
ನಿನ್ನೊಡಲಲಿ ಜೀವಾಳಿಯಿರದಿರೆ
ಕೊರವಿಲ್ಲ, ಜೀವನೋಚಿತವಾದ
ಬಗೆವಗೆಯ ಅಪಾರ ಖನಿಜದ್ರವ್ಯ
ರಾಶಿಯಿರೆ ರಾಷ್ಟ್ರಗಳಿಗೆ ಅದ್ಭುತ
ಐಶ್ವರ್ಯದಾನಿ ನೀನಹುದು ! ಇರಿರ್,
ನಿನಗಲ್ಲವೊ "ಮೃತಸಮುದ್ರ"ವೆಂಬ
ಬಿರುದು ! ನಿನ್ನಂ "ಸ್ವರ್ಣ ವಾರ್ಧಿ"ಎನೆ
ಸರಿಯೆಂಬುದು ಕವಿ ಮನದ ಹಾರೈಕೆ !

— o —

ಪತ್ರಿಕೆ

ಪತ್ರಿಕೆ ಓದದ ಬೆಳಿಗ್ಗೆ
ಬಾರದು ಮನಸಿಗೆ ಸಂತಸ.
ಪತ್ರಿಕೆ ಬಂದರೆ ತರ್ಪುದು
ಲೋಕದ ವಿಚಿತ್ರ ವಿಚಾರ
ಪತ್ರಿಕೆ ಇಲ್ಲದೆ ತುಂಬದು
ಮಾನಸ ಸಂಪುಟ ಅನುದಿನ.

— o —

ವಿಶ್ವಶಾಂತಿ

ನ್ಯಾಯಾಲಯಗಳಲಿ ನ್ಯಾಯದ ಸುಳಿವಿಲ್ಲ
ಮೇಲ್ನೋಟಕೆ ನ್ಯಾಯಮಂದಿರ. ಒಳಗಡೆ ಸೇರಿದೆ
ಎಲ್ಲಿಲ್ಲದ ಹೀನಾತಿಹೀನ ಭ್ರಷ್ಟಾಚಾರ !

ದೇಗುಲಗಳಲ್ಲಿ ಪರಮ ಭಕ್ತಿಯ ಸುಳಿವಿಲ್ಲ.
ಪೂಜೆಯೆಂಬುದು ಡಾಂಭಿಕತನದ ಅವತಾರ.
ಕೊಳಕು ಮನ ; ಕೊಳಕು ಆಚಾರಗಳ ಭಂಡಾರ !

ರಾಜಕೀಯ ಕ್ಷೇತ್ರಗಳಲಿ ತುಂಬಿ ತುಳುಕುತಿದೆ
ಮೋಸ–ಕಪಟ–ಅನೀತಿ–ಅನ್ಯಾಯಗಳ ತಂತ್ರ
ಕೊನೆವರಿಯದ ಹೊಲಸಿನ ಹೇಸು ಜೀವನ ಶಿವನೆ !

ಸಾಮಾಜಿಕ ರಂಗದಲಿ ಸ್ವಾರ್ಥವೆ ಪರಮಾರ್ಥ
ಪೆಣ್ಗೊಲೆ ಧರ್ಮಗೊಲೆ ನಡೆದಿದೆ ಸಾರ್ರೋದ್ಧಾರ
ವ್ರತದಿಂ ! ಇದೆಂದಿಗು ಕೊನೆಗೊಳ್ಳದು ಭಗವನ್ !

ವೇದ–ವೇದಾಂತ ಕಾಲೀನ ಪರಮ ಘೋಷಣೆ
ಶಾಂತಿ ಶಾಂತಿ ಶಾಂತಿಃ ! ವಿಶ್ವಶಾಂತಿಗಾಗಿಯೆ
ಮೂಡಿತ್ತೈ ವೇದ ಸಂಭವ ಶಾಂತಿ ಸಂದೇಶ !

ಆದೊಡೇಂ ವೇದ ಭೂಮಿ-ಭಾರತ ವರ್ಷದಲಿ
ಶಾಂತಿಯ ಹೆಸರೇ ಇಲ್ಲವೆನೆ ಮಮ ಜೀವಂ
ತಳಮಳಿಪುದು ಸಂಕಟದವತರಣದಿಂ ಹರಿಯೆ !

→

ಇಂತಾದೊಲ್ಲಿಡೆಯ ಸತ್ ಜೀವನದ ಸುಶಾಂತಿ ?
ಇಂತಪ್ಪ ಹೊಲಸಗಳನು ಜಡಿದು ಕುಟ್ಟಿ ರಾಷ್ಟ್ರದ
ಗಡಿ ದಾಂಟಿಸಿ ನಿಜ ಶಾಂತಿಗೆ ದಾರಿ ಮಾಡೈ ಹರಿಯೆ !

ಅಧರ್ಮವಂ ತೊಡೆದು ಜಗತ್ತಿನ ಕಳಂಕಂ
ಅಳಿಸಿ ಶಾಂತಿಯಂ ಮೂಡಿಸು. ನಿನ್ನ ಹೃನ್ಮನದ
ಶಾಂತಿಯೇ ದ್ರವಿಸಲಿ ವಿಶ್ವಶಾಂತಿಯು ನೇಮದಲಿ !

ಶಾಂತಿಃ ಶಾಂತಿಃ ಶಾಂತಿಃ

— ೦ —

ವಚೋಹಿ ಸತ್ಯಂ

ಪರಮಂ ವಿಭೂಷಣಂ

ಸತ್ಯವೆನ್ನ ಪರಮಾತ್ಮ
ಸತ್ಯವೆನ್ನ ಪರಮ ದ್ರವ್ಯ
ಸತ್ಯವೆನ್ನ ತಾಯಿ ತಂದೆ
ಸತ್ಯವೆನ್ನ ಜೀವ ಧರ್ಮ
ಸತ್ಯವೆನ್ನ ನ್ಯಾಯ ನೀತಿ
ಸತ್ಯವೆನ್ನ ಸಂಜೀವನ
ಸತ್ಯವೇ ತ್ರಿಲೋಕ ಪ್ರಿಯಂ

— ೦ —

ಪಾನ್-ಆಮ್ ದುರಂತೆ

ಸಾವಿರದೊಂಭೈನೂರೆಂಭತ್ತಾರರ
ಸೆಪ್ಟೆಂಬರ್ ಐದನೇ ತೇದಿ
ಅತ್ಯಂತ ದುರದೃಷ್ಟಕರ ದಿನ ಕಣ !
ಕರಾಚಿಯ ವಿಮಾನ ನಿಲ್ದಾಣದಲಿ
ಇಂಧನವಂ ತುಂಬಿಕೊಳೆ
ಇಳಿದ ಅಮೆರಿಕೆಯ ವಿಮಾನ-ನತದೃಷ್ಟ ವಿಮಾನ !
ಅರಿತುದೇಂ ಇಂತಪ್ಪ ದುರಂತವಮಂ ?
ಆ ಚಣಂ ಪಾನ್-ಆಮ್ ವಿಮಾನವಮಂ
ಛದ್ಮ ವೇಶದಲಿ ಬೊಕ್ಕ ದುಷ್ಟ ಚತುಷ್ಟಯರ್
ಸ್ವಾರ್ಥ ಸಾಧನೆಗಾಗಿ, ಒಡಲ್ಗಿಚ್ಚಿನ
ಸೇಡಿಗಾಗಿ ನಿರ್ದಯೆಯಿಂ ಢಮಢಮನೆ
ಸುಡುಗೋಲಿ ಒಗೆದು ಕೊಂದು
ನೆತ್ತರಿನ ಹೊಳೆ ಹರಿಸಿದರ್ಯೆ ನಿರ್ಯೋಜನೆಯಿಂ !
ಸ್ತ್ರೀಯರೆನ್ನದೆ ಮಕ್ಕಳೆನ್ನದೆ
ಸುಡುಗೋಲಿ ಒಗೆದು ಸುಡಲ್ ಮನವೆಂತು ಸಂತು ?
ನಿರಪರಾಧೀ ಪ್ರಯಾಣಿಕರ್
ಇಂತಪ್ಪ ದುರಂತವಮಂ ಬಗೆದಿದ್ದರೇಂ ಮನದಿ
ವಿಮಾನ ಏರುವ ಮುನ್ನ ?
ಬುದ್ಧಿ ಮಾನ್ಯರ್-ರಾಷ್ಟ್ರೋದ್ಧಾರಕೆ
ಆಧಾರಮಪ್ಪ ಬುದ್ಧಿಮಾನ್ಯರ್
ಚಣದಲಿ ಸಗ್ಗ ಸುಧೆಯುಂಡರ್ !
ಬಾಳು ತುಂಬದ ಮುನ್ನ ಭೋಂಕನೆ ಒದವಿದ
ಮರಣ-ಅನುಭವಿಸಲಾಗದ ಮರಣ
ಸೆಳೆದೊಯ್ಯಿತೆ ಪ್ರಾಣವಮಂ ?

→

ಓ ! ಧೂರ್ತ ಶಿಖಾಮಣಿಗಳೇ !
ದುರ್ವಿಧಿಯ ಕೈಯಲ್ಲಿ ಭವಿತವ್ಯಮಂ ಅಡವಿಟ್ಟು
ಆವ ಧೈರ್ಯದಿಂ ಹೇಸುಕಾರ್ಯಕ್ಕಿಳಿದಿರ್ಪೈ ?
ನಿಮ್ಮ ಹೀನಕೃತ್ಯದಿಂ ಪೆತ್ತಮ್ಮನ
ಹೃತ್ ಸಂಕಟವೆಷ್ಟೆಂಬುದನು ಬಲ್ಲಿರಾ ?
ಹೆತ್ತೊಡಲಿಗೆ ಕಿಚ್ಚಿಟ್ಟು ಬದುಕುವರೇಂ ?
ಇರ್ಕೆ, ಇಂ ಪಾಕಿಸ್ತಾನಿಗಳ್
ಬಿಡುವರೇನ್ನೈ ನಿಮ್ಮ ?
ನೂರಾರು ಮಂದಿಯಂ ಗಾಯವಡಿಸಿ
ಹಲವಾರು ಮಂದಿಯಂ ಕೊಂದ
ಧೂರ್ತರ್ ಬದುಕಲಕ್ಕುಮೆ ?
ಇನ್ನು ನಿಮ್ಮ ಪೆತ್ತ ಜನನಿಯರ್ಗೇಂ,
ಉತ್ತರ ?
ಆ ತಾಯಂದಿರಿಗೆ–ಹೊತ್ತು ಹೆತ್ತು ಲಾಲಿಸಿದ ತಾಯಂದಿರಿಗೆ
ಮಹಾ ಅಪಮಾನದೊಂದಿಗೆ
ಪುತ್ರರಂ ಕಳೆದುಕೊಳ್ವ ದುರದೃಷ್ಟಕರ ಪ್ರಸಂಗ !
ನಿಮ್ಮ ಕೊರಳ್ಗೆ ನೇಣಿನ ಮಣಿ ಬೀಳುವನ್ನ
ಜೇಲಿನ ಅತಿಥಿಗಳಾಗಿ ಅನುಭವಿಸಿರ್ಪೈ
ನರಕವಾಸಂ...ನರಕ ಸುಖವಾಸಂ.

— o —

ಒಳ್ಳೆಯ ಗುರುವಿಲ್ಲದ ಮಠವು
ನುರಿತ ಪಿರಿಯರಿಲ್ಲದ ಮನೆಯು
ಬರಿಯ ಮಸಣಂಗಣ ಕಣ !

ಮಾದಕ ವ್ಯಸನಿ

ಮಾದಕ ವ್ಯಸನಿ ತಾನತಿ
ನತದೃಷ್ಟನೀ ಅವನಿಯೊಳ್ !
ತಡೆಯಲಾರ
ತಾಳಲಾರ
ಬಿಡಲಾರ
ದುರ್ಬಲ ತನುಮನಗಳಿಂ
ಜ್ಞಾನ--ಪ್ರಜ್ಞಾನವೂ ಭಾರ !
ಬಾಳು--ಬದುಕೂ ಭಾರ !
ಬದುಕಲಾರ, ಸಾಯಲಾರ.
ಎಷ್ಟೋ ಮಂದಿ ವೈದ್ಯರೂ
ಹೊರತಲ್ಲ ಈ ದುರ್ವ್ಯಸನದಿಂ !
ಆವಾವ ಬಂಧುಗಳ್ ಮಿತ್ರರ್
ಸರಿಪಡಿಸಲಾರರ್ !
ಪ್ರಶಾಸನಂ ಹಿಡಿಯಲಾರದು,
ಬಡಿದು ಬಂಧಿಸಲಾರದು.
ಇಂತಪ್ಪ ದುರ್ವ್ಯಸನಕೆ
ಬಲಿಯಾದೊಡೆ
ವಿದ್ಯೆ–ಬುದ್ಧಿ–ಜಾಣ್ಮೆಗಳ ಸಂಪತ್ತು
ಮೇಣ್ ಜೀವನ–ಸಂಜೀವನಗಳ ಮೌಲ್ಯ
ನ....ಶಿ...ಸಿ
ಎಂದಿಗೂ ತುಂಬಲಾರದ ಹಿರಿ ನಷ್ಟವೈ ಬಾಳಿಗೆ !
ತಿಳಿತಿಳಿದು ಎಂದೆಂದಿಗೂ
ಮಾದಕ ವ್ಯಸನಿಯಾಗದಿರ್
ತಿಳಿತಿಳಿದು ಅರಿತರಿತು
ದುರ್ವ್ಯಸನಿಯಾಗದಿರ್ ಸಂಜೀವನಾರ್ಥಂ !

— ೦ —

ದೀನ ದರಿದ್ರರು

"ಬೆಟ್ಟ ಕಪ್ಪುರವುರಿದು ಬೊಟ್ಟಿಡಲು ಬೂದಿಲ್ಲ"

ಓ, ತಾಯೆ ! ಭಾರತ ಜನನಿ ! ಪರಮ ಪುಣ್ಯಾವನಿ
ವೇದವೇದಾಂತ ಪರಿಮಳ ಮೋದಿನಿ ! ಪವಿತ್ರ
ಸಂಸ್ಕಾರ ಸರ್ಪಿಣಿ ! ಮಮ ಸಂಸ್ಕೃತ ಜನನಿ ! ಭೂ
ರಮಾ ಬಂಧುರಯಾನೆ ! ಅಃ, ನೀನತಿ ಸುಂದರಿ !
ವರ ಮಾತೃಮಯೀ ! ಸತ್ಕೀರ್ತಿ ಶಾಲಿನೀ !
ದೇಶೋವಿಶಾಲ ಉತ್ಕೃಷ್ಟ ಭೂ ವಿಸ್ತಾರೆ !
ನಿನ್ನೊಳಿದೆ ಅಷ್ಟೈಶ್ವರ್ಯದ ಸಕಲ ಸಂಪತ್ತು !
ನೀನಾವ ರಾಷ್ಟ್ರದೇವಿಗೆ ಕಡಿಮೆ ವೇಳ್ತಾಯೆ ?
ಬೃಹದ್ ಪರಮ ರಾಷ್ಟ್ರ ! ಬೃಹದ್ ಜನ ಸಾಂದ್ರ !
ಜ್ಞಾನ ವಿಜ್ಞಾನ-ಸುಜ್ಞಾನಾದಿಗಳ ಕೇಂದ್ರ !
ಮತ್ತಿದೇಂ, ನಿನ್ನ ಹೊನ್ನುಡಿಯಲಿ ನರಕ ತುಲ್ಯ
ಬಾಳ್ಕೆ ? ಎಲ್ಲೆಲ್ಲಿಯುಂ ದಾರಿದ್ರ್ಯದೇವತೆಯ
ಉತ್ತಾಲ ನರ್ತನಂ ? ನಿನ್ನ ಶೃಂಖಲೆಗಳಚಿ
ನಾಲ್ಕು ದಶಕದಮೂಲ್ಯ ಕಾಲಮಾನಂ ಸಂದು
ಹೋದುದಲ್ತೆ ಪರಿದೋಡುವ ನದೀ ನೀರಿನೊಲ್ ?
ಬಡಜನಂ ದುಡಿದೊಡಂ ಲೋಕ ಪ್ರಜ್ಞೆ ಇಲ್ಲದೆ
ಬಾಳಿಗೊಂದು ಸುಂದರ ಜೌಕಟ್ಟಿಲ್ಲದ ಗೋಳು.
ಈವಗೆಯ ವ್ಯರ್ಥ ಬದುಕಿನಿಂ ಎಂದೆಂದಿಗುಂ
ರಾಷ್ಟ್ರದಲಿ ದಾರಿದ್ರ್ಯದೇವತೆಯ ಜೋಗುಳಂ !
ಅಂತುಮಲ್ಲದೆ ದುರ್ವಿಧಿಯ ಕೂರ ಸಂಚಿನಿಂ
ನಿರ್ದಯಿ ವರುಣನವಕೃಪೆಯಿಂ ರಣರಣಿಪ
ಸುಡುವಿಸಿಲ ಘೋರರೂಪಿನ ನೋಂಪಿಯಿಂ ನೊಂದು →

ಕಂಗೆಟ್ಟ ಜನ ಸಂಗಂ ಊರು ಕೇರಿಗಳ್ ತೊರೆದು
ಗಂಟು ಮೂಟೆಯುಂ ಕಟ್ಟಿ, ದನ, ಕರು ಎಮ್ಮೆ,
ನಾಯಿ, ಕೋಳಿ, ಕತ್ತೆ ಮೊದಲಪ್ಪ ಸಾಕು ಪ್ರಾಣಿಗಳ
ಮೇಣ್ ಪಸಿವೆಯಿಂ ಕಂಗಾಲಾದ ಎಳೆ ಮಕ್ಕಳ
ಸಹಿತ ಶೀರ್ಣಜೀರ್ಣಿತ ದೇಹ ಭಾರಮೊ ಎನಲ್
ಮಂದಗತಿಯಲಿ ವಲಸೆ ಹೊರಟ ಯೋಗ ದುಃಖದ
ಸಾರ ಕಣ ! ಕಣ್ಣೀರಿನ ಗೋಳು ಕಣ ! ಮತ್ತಂ
ರಣಬಾಳಿನ ಕಣಜ ಕಣ !

ಓ, ಒಬ್ಬರೆ ಇಬ್ಬರೆ ?
ಸಾಲುಗಟ್ಟಿ ಸಾಗುತಿಹ ದಂಡಿನ ಹಿರಿಸಾಲು !
ಸ್ವತಂತ್ರ ರಾಷ್ಟ್ರದಲಿ ಅಸಂಖ್ಯಾತ ದೀನ
ದರಿದ್ರರ ದಂಡು ! ಅರೆ ಹೊಟ್ಟೆ, ಅರೆಬಟ್ಟೆ ಮೇಣ್
ಮಕ್ಕಳ ಕೀಚಲ ದನಿಯು ರಾಗಮಾಲೆ ! ಹಾ ! ಹಾ !
ದಾರಿದ್ರ್ಯವೆನಿತು ಸಂಕಟ ಪರಂಪರೆಯೊ ಶಿವನೆ !
ಕಾಲ್ನಡೆಯು ಜನಕೋಟಿ ಕಂಗಳಲಿ ಕಂಬನಿಯುಂ
ಸೂಸುತ ಪಿಡಿದಿರೆ ವಲಸೆಯು ಪಯಣ ಸಂಕಟದಿಂ,
ಕಣ್ಣೀರ್ ಹಿಂಗಿದುದು ಉಟ್ಟಬಟ್ಟೆಯಲಿ ಶುಭ್ರ
ಬಿಂದು ಬಿಂದುವ್ವೈಸಿ ! ನಡೆದು ನಡೆದು ನಡೆದು ಧೂಳೊತ್ತಿ
ಮೃಣ್ಮಯಂ ಬರಿಗಾಲ್. ಬಿಸಿಲೊತ್ತಿ ಸುಟ್ಟುರಿದು
ಕಪ್ಪು ತಳೆದ ಮುಖಮ್ಮೆ. ಕಾಂತಿಯಳಿದ ಕಂಗಳ್.
ಜಿಡ್ಡುಗಟ್ಟಿದ ಅಲಕರಾಶಿ ! ಇಂತಪ್ಪ ಕಡು
ದಾರಿದ್ರ್ಯ ಲಕ್ಷ್ಮಿ ಕೈಕೊಂಡ ಜೀವನಮಾರ್ಗ
ಯೋಗಂ ಕೊನೆಗೊಂಬುದು ಎಂಬೆಯ ? ಹಾ, ಒಡೆಯಾ !
ಎಲ್ಲಿ ಕೈಗೂಲಿ ಸಿಕ್ಕರಲ್ಲಿಯೆ ಸಂಸಾರ.
ಮೂಡೆಸೆಗೆ ಮೂಗಲ್ಲ ನಿಟ್ಟು ಕಡ್ಡಿಯಿಡುಕಿ ಕಿರು
ಅಗ್ಗಿಯಲಿ ಕೂಳು ಬೇಯಿಸಿಕೊಳ್ಳುವ ಸಂಕಟ →

ಪೂರ್ಣ ದೃಶ್ಯಂ ಕರುಳ್, ಕೋರೈಸುವನಿತು ಘೋರ !
ಬಟ್ಟ ಬಯಲ ಜೀವನಂ ! ಹಾಸಿ ಹೊದೆಯಲಿಲ್ಲಂ.
ವಾಸಕೊಂದು ಜೋಪಡಿಯುಮಿಲ್ಲಂ. ನೀರುನಿಡಿ
ಎಲ್ಲವೂ ದೂರಾತಿದೂರವೆ,. ಗುರಿಯಿಲ್ಲ
ಮುಂದೆ. ಸ್ವಂತಿಲ್ಲ ಹಿಂದೆ. ಕೂಲಿಗಾಗಿಯೇ
ಬದುಕು ಕೂಲಿಯಿಂದಾಗಿಯೆ ನಿಚ್ಚನಡೆ.
ದೇವ !
ಪುರುಷವರ್ಗ ಸಂಜೆಯಲಿ ಕೂಲಿಯ ರೊಕ್ಕಮಂ
ಮದ್ಯಮಾದಕಂಗಳ ಮೋಜಿನಿಂ ಸುರೆಯಂಗಡಿ
ಒಡೆಯಂಗಿತ್ತು ಕುಡಿದು ಹಣ್ಣಾಗಿ ಬಂದಪರ್
ಕಂಗಳಲಿ ರಂಗೇರಿಸಿ ಅತ್ತಿತ್ತ ತೂರಾಡಿ
ಮತಿಗೆಟ್ಟು ಮಡದಿ ಮಕ್ಕಳ ಮಾರಿಯಾಗಿ !
ಹಾ !
ಭಗವನ್ ! ಹಗಲೆಲ್ಲ ದುಡಿದ ಜೀವ ರಣಗೋಳ್
ಅನುಭವಿಸಿ ಬೆಂದ ಕೂಳ್ ಉಂಬದೆ ಕೆಡೆದಪರ್.
ನಿದ್ದೆಯ ಕೃಪೆಗೆ ಭೂಮಿಯೆ ಪಲ್ಲಂಕ ! ಗಗನವೆ
ಸೂರು ; ವಾಸಿಸೆ ಸಮತಟ್ಟಿನ ನೆಲಂ ಇಲ್ಲ ; ಓ,
ಸಂಯೋಜಿಸೆ ಸಮತಾ ಭಾವವೂ ಇಲ್ಲವೈ !
ಕಡು ದುಃಖದಗೋಳು ಚಿನ್ಮಯೀ ಭಾರತಜನನಿಯ
ಉಡಿಯಲಿ. ಆರ್ಥಿಕ ದಾರಿದ್ರ್ಯ ಜ್ಞಾನದಾರಿದ್ರ್ಯ
ಸಂಪೋಷಿತ ದಾರುಣ ಸಂಸಾರ. ಅಲ್ಲಿಯ ಕೂಲಿ
ಮುಗಿಯೆ ಮುಂದಿನ ಕೂಲಿಯರಸುತ ಮುಂಬರಿವುದು
ಕಾಸು ದೊರೆವ ಜಾಡಿನ ಬೆಂಬಿಡಿದು !
ಓ, ಸ್ವತಂತ್ರ
ಭಾರತಿ ! ಈ ದೀನ ದುಃಖಿಗಳ ಕಡೆಗೆ ಇರಲಿ
ತವ ಕಾರುಣ್ಯ ಪೂರ್ಣ ಕೃಪಾಮಯ ದೃಷ್ಟಿ !

O ! Lord serve the
poor humanity

— o —

ರಾತ್ರಿ ರಾಣಿ

ಹಚ್ಚನೆಯ ಹಸಿರು ಗಿಡದಿ ನಳನಳ
ಅರಳಿದ ಪೂವೆನೆ ಶೋಭಿಪೆ ನೀನು !
ಅಲ್ತಲ್ತು ; ಸಗ್ಗದ ಸಿರಿಯೊಡೆಯನೆ
ಮೂಡಿದನೆನೆ ಪೂಗಳವತಾರಿಣಿ !
ಗೊಂಚಲ್ ಗುದಿಗುದಿಯೆನೆ ರಂಜಿಸುತಿಹ
ಬೆಣ್ಣೆ ಬಿಳುಪಿಗೆ ನಸು ಪಸುರೊಸರ್ವ
ಹಾಲ್ಮೊಗದ ಚಿಣ್ಣ ಚಿಣ್ಣ ಪೂಗಳ
ವಾರಾಶಿ ಲವಂಗವಂ ನಲ್ ಪೋಲ್ವ
ಸುರಸುಂದರ ಪೂಗಳ್ ಸುಗಂಧಂ
ಬೀರುವುದು ರಾತ್ರಿಕಾಲ ಮಾತ್ರಂ !
ಹಗಲ್ ಇಡಿ ಎಲ್ಲಮಿರ್ದು ಸುಗಂಧ
ವಿರದ ಪೂ ರಾತ್ರಿಯಲಿ ಘಮಘಮಿಸಿ
ಹೃನ್ಮನಗಳಂ ಸ್ಪಂದಿಸುವುದು ಶಶಿ
ನಿಶೆಗೆ ಶೋಭೆ ತಾನಾದವೊಲ್ ಕಣ !
ನೀನಹುದು ನಿಜದಿ ರಾತ್ರಿಯ ರಾಣಿ !
ಮನೆ ಮನೆಯ ಪರಿಶೋಭೆಗೆ ನೀನಿರೆ
ಏಂ ರಸಾನಂದಮೊ ಹೃದಯಾಬ್ಧಿಗೆ !
ರಾತ್ರಿ ರಾಣಿ ! ಕವಿಮನ ಮೋದಿನಿ !
ನೀನಿರಲ್ ವೇಳ್ಕುಂ ಮನೆಮನೆಯಲಿ !

— ೦ —

ಮಂತ್ರೋಪದೇಶ

ಮುಂಜಾವದ ಪೊಳ್ತು ತನಿಗಂಪುವ ತಂಗಾಳಿಯುಂ
ಪೀರ್ದು ಮೈಗೊಂಡು ತಣ್ಣಗಿರೆ ಮೈ ನಡುಗಿಸುವವೋಲ್
ಪ್ರಾತಃರ್ವಿಧಿಗಳ ಪೂರೈಸಿದ ಪ್ರೌಢವಟು ಮಡಿಯುಟ್ಟು
ಜಮುನಾ ನದೀ ತೀರದಿಂ ಪರ್ಣಕುಟೀರಕೈದಂ.

ತಪಸ್ವಿ ಗುರುವರ್ಯಂ ಅಗ್ನಿ ಹೋತ್ರದೊಳ್ ಮಗ್ನನಿರೆ
ರಾಮಾನುಜಂ ಕೈಮುಗಿದು ಅತೀವ ಭಕ್ತಿ ಭಾವದಿಂ
ಧ್ಯಾನಮಗ್ನನಾಗಲ್ ಮನದೊಳಿಷ್ಟ ದೈವಂ ಮೂಡಿ
ಮೈಮರೆಸುವನಿತು ಧ್ಯಾನ ಮುದ್ರ ಗಂಭಿರ ಘನಂ !

ಮಹರ್ಷಿಯ ಅಗ್ನಿ ಹೋತ್ರಾದಿ ಕಾರ್ಯಕ್ರಮ ಮುಗಿಯೆ
ಪರಮ ಶಿವನ ಧ್ಯಾನ ನಿಮಗ್ನತೆಯುಂ ಕಂಡು ಅಮಿತ
ಆನಂದ ಭಾವದಿಂ ನಿತ್ಯೋಪದೇಶಂಗೈದು ತಾಂ
ನುಡಿದಂ "ಮಗನೆ ! ನಿನ್ನ ಧ್ಯಾನ ಶಕ್ತಿಗಾಂ ಮೆಚ್ಚಿದೆಂ !"

"ಗುರುವರ್ಯ ! ನಿಮ್ಮ ದಯದಿಂದೆನ್ನಯ ಮನೋವಿಕಾಸ
ಮಾಯ್ತು. ನೀಮೆನ್ನ ಜನ್ಮೋದ್ಧಾರಗೈದುಪಕರಿಸಿದಿರಿಂ.
ಆನೆಂದೂ ನಿಮಗೆ ಚಿರಋಣಿ !" ಎನುತೆ ಅಭಿವಂದಿಸಿದಂ.
ಆಗಳಾ ಗುರುವರ್ಯ ಸಂತಸಂದಾಳ್ದು ಪೇಳಿದಂ,

"ನೀನಿನ್ನು ವಟುವಲ್ತು. ಆಚಾರ್ಯನಪ್ಪ ಘನವಂತ !
ನಿನಗಿಂದು ಮಂತ್ರೋಪದೇಶಗೈವೆನ್ ಕೇಳ್" ಎನುತೆ
ಅವನ ಕಿವಿಯೊಳ್ ಊದಿ ಮಂತ್ರೋಪದೇಶಮಂಗೈದು
ಮತ್ತೆಂದನ್ "ಕೇಳ್, ತರಳ ! ಇದಂ ತಿಳಿಸದಿರ್ ಆರ್ಗ್ಗ !"

→

ರಾಮಾನುಜಂ "ಗುರುವೆ ! ಏನಪ್ಪುದದರಿಂ ದಯದಿಂ
ಪೇಳಿಂ" ಎನಲ್ಕೆ ಗುರುವೆಂದಂ "ವಿಮೋಚನೆ ಕಣಾ !"
ಆ ಕೂಡಲೆ ರಾಮಾನುಜಂ ಪೊರಗುಯ್ದು ಬಹುಜನಂ
ಕೂಡಿರ್ದ ಮಾಸಭೆಗೆ ಮಂತ್ರಮಂ ಕೂಗಿ ಪೇಳಿದಂ !

"ಇದೇನೈ ತರಳ ? ಆರಿಗು ತಿಳಿಸದಿರ್ ಎಂದೆನಲ್ತೆ
ನೀನಿದೇಂಗೈದೆ ?" ಎಂದನಾಗುರುವರ್ಯ ಕೋಪದಿಂ
ಕೆಂಗಣ್ಣ ನೋಟದಿಂ ನೋಡುತ್ತೆ. ಆಗಳಾ ಶಿಷ್ಯ
ಸಂತೋಷ ಸಮಾಧಾನಗಳ ಗಣಿಯಾಗಿ ನುಡಿಸಿದಂ,

"ಅಯ್ಯ, ಮದ್ಗುರುವೆ ! ಮೋಕ್ಷಯೆಲ್ಲರ್ಗೆ ವೇಳ್ಕುಂ !
ಅಂತಲೇ ಎಲ್ಲರಿಂಗೊರೆದು ತಪ್ಪುಗೈದಿರ್ಪೆ. ಕೇಳೈ,
ನೀನಾವ ಶಿಕ್ಷೆಗೈವೆಯೋ ಅದೆನಗಕ್ಕು !" ಎಂದನತಿ
ವಿನಯದಿಂ, ಲೋಕಪ್ರಜ್ಞೆಯಿಂದೆ ರಾಮಾನುಜಾಚಾರ್ಯಂ.

—೦—

ಗಾಂಧೀಜಿಯವರ
ಮೂರು ಪದಗಳ ಸೂತ್ರ
ಸ್ವಾತಂತ್ರ್ಯ ಯಜ್ಞದ
ಪವಿತ್ರ ಸಂದೇಶ
'ಮಾಡು ಇಲ್ಲವೆ ಮಡಿ'
ಲೋಕ ಕಲ್ಯಾಣ ಮಂತ್ರ.

— ೦ —

Black Pool

ವಿಜ್ಞಾನ ಯುಗೀಯ ಪೂರ್ವಾರ್ಧದಲಿ
(ಹದಿಮೂರನೆಯ ಶತಮಾನದಲಿ)
ಮಹಾಯಂತ್ರಸಾಧನೆಯ
ವಿಜ್ಞಾನ ಕ್ಷೇತ್ರದೋಳ್ ಒದವಿದ ಭಂಗ ಬನ್ನಗಳ
ರಣಗೋಳು ಸಾಮಾನ್ಯಮೇನಲ್ಲಂ.
ಹಳ್ಳಿಯಿಂದ ಹಬ್ಬಿ ಮುಂಬೆಳೆದು
ಮಹಾ ಸಾಗರ ತೀರಮಂ ಮುಟ್ಟಿ
ಲಂಕಾಶೈರಿನಲಿ ಅಧಿಪತ್ಯ ಸಾಧಿಸಿದ
ಅದ್ಭುತ ಕಾರಖಾನೆಯುಂ ನೆನೆಯೊ !
ಗಗನ ಚುಂಬೀ ಗೋಪುರಂ
ಮುಗಿಲಂ ಮುದ್ದಿಸಿ, ತಂಗಾಳಿಯಂ ಚುಂಬಿಸೆ,
ಐನೂರಿಪ್ಪತ್ತು ಅಡಿಗಳೆತ್ತರಕೆ ಏರಿ
ಗಗನದಲಿ ಸಗ್ಗಿಗರಿಂ ಓಲೈಸುತಿರೆ
ಪರಿಭಾವಿಸಿ ನೋಡೈ ಮನವೇ !
ಎಲ್ಲ ಸ್ವಸ್ಥವಿರೆ ಧುತ್ತೆಂದು ಒದವಿತಲಾ
ರುದ್ರ ಗಂಭೀರ ಮಾರಣ ಹೋಮ !
ಆವ ದುಷ್ಟಗ್ರಹದ ಪೀಡನೆಯೋ,
ಕ್ರೂರ ದುರ್ವಿಧಿಯ ಸಂಚಿನ ಮಿಂಚಿನ ಹೊಂಚೋ,
ಕಾರಖಾನೆಯ ಕಲುಷಿತ ವಾತಾವರಣಮೊ
ಮತ್ತಾವ ಕಾರಣಮೋ
ಒರ್ಮೆಗೇ ಬಂದೆರಗಿತಲಾ
Bubonic plague ! →

ಓಹೋ ! ಅದೇಂ ಸಾಮಾನ್ಯ ರೋಗಮೋ ?
ಲಕ್ಷಾನುಲಕ್ಷ ಜನರಂ ಹಿಡಿದು ಹಿಂಡಿ ಹಿಪ್ಪೆಗೈದು
ಸ್ವರ್ಗಾರೋಹಣ ಮಾಡಿಸಿತ್ತೈ ।
ಮಹಾಮಾರಿ ನುಂಗಿ ನೊಣೆದವೊಲ್ !
ಆ ಮಹಾರೋಗಮಾರಿ ಮುಂದೆರಡು ಮೂರು
ಶತಮಾನಗಳವರೆಗೂ ಉಳಿದು
ಮನೆ ಮನೆಯ ಆತಿಥ್ಯಂಬಡೆಯುತಲಿರ್ದು
ತನ್ನ ಪಾದಗಳ ದೃಢ ಚಿಹ್ನೆಯೊತ್ತಿಯೊತ್ತಿ
ಇತಿಹಾಸದ ಪುಟದಲಿ ಕರ್ಪು ಬೊಟ್ಟಿಟ್ಟಿತ್ತೈ
ಲೋಕ ಎಂದೆಂದೂ ಮರೆಯದವೊಲ್ !
ಕರ್ಪುಕೊಳ ಮಾಗಿ....!

— ० —

ಸಂಜೀವನಾನುಭವ
ಉಕ್ಕುಕ್ಕಿ ಹರಿಯೆ
ನಲ್ ನುಡಿಗಳ ಸರಿ
ಲೋಕ ಪ್ರಜ್ಞೆಯ
ಸೂಳ್ಸರಿಯೇ ನೋಡಾ !

— • —

ಪುಸ್ತಕಂ ಹಸ್ತಭೂಷಣಂ

ವಿದ್ಯೆಯೆಂಬುದು ಕೊಳ್ಳವಮಾಲಲ್ಲ.
ಎರವು ಪಡೆಯಲ್ ಬಪ್ಪುದಲ್ಲ ಕಣ್!
ವಿದ್ಯೆಯಂ ಆರ್ಜಿಸಿ ಮನಗೊಳಿಸಿ
ಬೌದ್ಧಿಕ ಕರಂಡ ತುಂಬೆ ನಿಜಗತಿ !

ದಿನದಿ ಅಷ್ಟಿಷ್ಟು ಓದಿ ಬರೆದರೆ
ಅದು ಮಹಾ ವಿದ್ಯೆಯಲ್ಲವೊ ! ಓದಿ
ಸದ್ಗ್ರಂಥಗಳ ಸಾರವಂ ಹೀರಿ
ಮನದುಂಬಿ ಮೈದುಂಬಿ ಹಿರಿಗಡಲ್
ತಾನಾದಪುದೆ ಸತ್ಯ ಸಂಪತ್ತಿ.

ಸದ್ಭಾವ ಭಂಡಾರ ತುಂಬಿಕೊಳೆ
ಸದ್ಗ್ರಂಥ ಸದ್ಗುರುಗಳಿಲ್ಲದೆಯೆ
ಆವುದೇನ್ನೈ ಈ ಜನ ತಂತ್ರದೊಳ್ ?
ಶ್ರೀಕೃಷ್ಣ ಪರಮಾತ್ಮ ಭಗವದ್
ಗೀತೆಯೊಳ್ ಗೈದ ಉಪದೇಶಮಿದು
....ಪ್ರಣಿಪಾತೇನ, ಪರಿ ಪ್ರಶ್ನೇನ
ಸೇವಯಾ...ಅಂತಲ್ಲದೆಯೆ ವಿದ್ಯೆ
ಬಾರದು ಕಣ ! ಕಲಿಪುವ ಗುರು ಬರಿದೆ
ಪೇಳ್ದೊಡದು ವಿದ್ಯೆಯಾಗರಮಲ್ತು.

ವಿವರ ವಿವರಮಾಗಿ ಬಿಡಿಸಿ ತಿರುಳ್
ತೆರೆದು ಮುಂದಿಡುವುದೆ ನಿಜ ವಿದ್ಯೆಯುಂ ;
ಹರ ತನ್ನೊಳಿರ್ದು ಗುರು ಇರದಿರೆ

→

ಹರನು ಇಲ್ಲ ; ಗುರುವೂ ಇಲ್ಲ ಕಣ !
ಪ್ರಜ್ಞಾನ ಪ್ರಾಪ್ತಿಗೆ ಗುರುವಿನ ದಯೆ
ಇರುವೇಳ್ಕುಂ. ಕಲಿತು ಅರಿತುದ ಮರೆತು
ಉಂಡಾಡಿಯಾದೊಡದರಿಂ ನಷ್ಟ
ತನಗೆ ಗುರುವಿಂಗಲ್ಲ. ಕಲಿತುದಂ
ಮನ ಮಥಿಸಿ ಪ್ರಶ್ನೋಪಪ್ರ–
ಶ್ನೆಗಳಿಂಬುಕೊಟ್ಟು ಮನದ ಶಂಕೆ–
ದುಶ್ಶಂಕೆಗಳಂ ಬಡಿದು ಬಿಸಾಡಿ
ವೈಕೊಡವಿ ವಿದ್ಯಾರ್ಜನೆಗೆ ಸತತ
ಸಿದ್ಧನಾಗೈ ಓ ಮಮ ವಿದ್ಯಾರ್ಥಿ !
ಪುಸ್ತಕಂ ಸದ್ ಹಸ್ತ ಭೂಷಣಂ !

— ○ —

ಮನುಷ್ಯಜೀವಿ ಕರಕುಶಲಿ.
ಕರಕುಶಲಿಯಲ್ಲದವನು
ಎಂದೂ ಮನುಷ್ಯನಾಗಲಾರ.
ಕರಕುಶಲತೆ–ಮನಃಕುಶಲತೆ
ಆತ್ಮೋನ್ನತಿಗೆ ತೆರೆದ ದಾರಿ.

— —

ರಣರಂಗಕೆ ಮೀಸಲಿರಿಸಿದ ದ್ರವ್ಯ....

ಓವ್ಹೊ. ಭಾರತ ವರ್ಷ ! ಪರಮ ಪುಣ್ಯ ಧರಿತ್ರಿ !
ಸಕಲ ಸಂಪತ್ ಭರಿತ ನಿಸರ್ಗದೈಸಿರಿಯಿಂ
ವಿಜೃಂಭಿಸಿದ ಮನೋರಮಾ ಭೂ ರಾಗಿಣೀ !
ಈ ಪುಣ್ಯ ಭೂಮಿಯಲಿ ಸಿರಿಸಂಪತ್ತಿಯುಂ
ಸಮತೋಲನ ತಪ್ಪಿದೋಲ್ ಹರಿದಿದೆ ದಾರಿದ್ರ್ಯ
ನದಿ ವೈತರಣಿ ಎಡವಿಡದೆ. ಆವಪದೇವತೆಯ
ಕೂರ ದೃಷ್ಟಿಯೊ ಮತಿಮತಿಯಂ ಜಡತನಕದ್ದಿದೆ !
ಗತಿಗೆಟ್ಟ ಜನಕೋಟಿಯುದ್ಧರಣಕೆಂದೆನಲ್
ರಾಷ್ಟ್ರದಾ ಎಡೆವಿಡೆಗಳಲಿ ಸರಸತಿ ಅಲಯಂ
ಪೊದಳ್ದುದು ಜೀವನದೊಳ್ಪಿಗೆ. ಆದೊಡೇಂ, ದಿವ್ಯ
ಜಡತ್ವಂ ಹಿಂಗಲಿಲ್ಲಂ. ಪರಮ ಬುದ್ಧಿಯೇಂ
ಬೆಳೆಯಲಿಲ್ಲಂ. ಬಡತನ ಜಡತನಗಳೊಂದೆನೆ
ಹಿಡಿದಿದೆ ಕೊನೆಗಾಣದ ಹಾದಿ. ರೋಗ ರುಜಿನಗಳ
ನಂಟು ನೀಡುತಿರೆ ಮರಣಾಂತಕ ಉರುಳ್ಕೂರಳ್ಗೆ,
ಲೆಕ್ಕಿಸದೆ ಮತಿಮೌಢ್ಯದ ಕುಂಡದಲಿ ಮುಳುಗೆದ್ದು
ಸ್ವತಂತ್ರ ಭಾರತದ ಏಳ್ಗೆಗೆ ಮಿತ್ರೊ, ಎನಲ್
ಜನಜೀವನದಿ ಹರಿದಿದೆ ಘನ ವೈತರಣಿಯಾಗಿ,
ಕಡು ಬಡತನಮಂ ಇನ್ನಿನಿಸು ಬಡತನಗೊಳಿಪೊಲ್ !
ಸುವಿದ್ಯಾದಾರಿದ್ರ್ಯ ಎಲ್ಲಕೂ ಕಾರಣಮಿರೆ
ಹಿಡಿ ಹೊನ್ನು ಕುಡಿಕೆ ಹೊನ್ನಾಗಿಸುವ ಕಾರ್ಯಮಂ
ಹೊಂಚಿಕೊಳ್ವ ಸಾಧನೆಯ ಭಾವಿಸು ಹೇ ಮನವೇ !
ಜಗದೊಳ್ ರಣರಂಗಕೆ ಮೀಸಲಿರ್ಪ ಅಗಾಧ
ದ್ರವ್ಯರಾಶಿ–ಸಾಗರ ಸದೃಶ ಪರಮ ದ್ರವ್ಯ →

ರಾಶಿ ಸಾಮಾನ್ಯಮಲ್ತು ; ಕೊಲ್ವ ಕಲೆಯ ತಾಯಿ
ನೆಗಳ್ವ ಕಲೆ ! ಅಂತಲ್ಲದೆ ಶಾಂತಿ ಸುಗಾಲಂ
ನುಂಗಿ ನೊಣೆಯುವುದಲಾ ಮಹಾ ದ್ರವ್ಯರಾಶಿಯಂ !
ಅದರಲಿನಿತು ಅಜ್ಞಾನ ದಾರಿದ್ರ್ಯಮಂ ಜಡಿ
ಕುಟ್ಟುವೊಡೆ ಬಳಸಿ ಘನ ಪುಣ್ಯ ಸಂಪಾದಿಸಿರೈ ;
ಇದೆನ್ನೆಯ ಆತ್ಮಿಯ ಮನವಿ ವರ ಬಂಧುಗಳಿ !

Born free taxed to death !

— o —

ವಿಧಿಯ ತಡೆ ಬಡೆಯಂ
ಅಂತಃಶಕ್ತಿಯಿಂದಲಿ
ಜಡಿ ಕುಟ್ಟಿ ಒಡೆಯುವುದೆ
ನಿಜವಾದ ಪ್ರಯತ್ನ ಕಣ !

— o —

Hand Post

ಓ, ಭಗವನ್ ! ನೀನೆಂಥ ಕರುಣಾಳು !
ಪರಮ ಪುರುಷ ! ದಿವ್ಯ ದಯಾಳು !
ನಿನ್ನನೆನಿತು ನೆನೆದು ತವಿಸಿದೊಡದು
ಸಾಲದೆನೆ ಆನೆಂತು ಸಲಿಪೆ
ನೀಗೈದಿಹ ಉಪಕಾರಕೆನ್ನ ರಿಣ ?
ಕೇಳ್ ! ಆನೇಂಗೈಯಲಿಲ್ಲ,
ನಿನ್ನ ಪಾದಸೇವೆಯನು ಮನಮುಟ್ಟಿ.
ನೀಂ ದಯದಿಂ ಉನ್ನತ ಮನುಕುಲ
ಸ್ಥಾವರಕೊಗೆದೆನ್ನಂ ಉಪಕರಿಸಿದೆ !
ಆಂ ಸಲಿಪೆನೆಂತು ತವರಿಣಂ ?
ತಿಪ್ಪತಿಪ್ಪ ನಡೆಯೆ ಕಲಿಸಿದೆ ನೀನು ;
ನಡೆದು ಬಂದೆ ಎಡೆವಿಡದಾನು !
ಕಂಡು ಕೇಳರಿಯದ ಪಥಮಂ ಪಿಡಿದು.
ಎಲ್ಲಿಯು ನಿನ್ನಯ ದರುಶನ
ಪಡೆದೆನಿಲ್ಲಂ. ಹುಡುಕಿ ತಡುಕಿ ನಿನ್ನ
ಕಾಣದಾನು ಮುನ್ನಡೆಯುತಿಹೆ ;
ನಿನ್ನನರಸುವ ನೇಮದಲಿ. ಮುಂದಿನ
ನೆಲೆಯ ಕಾಣದೆ ತೊಳಲುತಿಹೆನ್.
ಇನ್ನೆನಿಸು ದೂರವಿಂತು ಪಯಣಿಸಲಿ
ಪೇಳೆನ್ನ ಹೃದಯದ ಸಿರಿಯೆ !
ಪಗಲಿರುಳ್ ನಡೆದೊಡಂ ಎಡೆವಿಡದಲಿ
ಸವೆಯದೀ ದೂರ ಪಥ ರಿಣಂ.
ಕಡುಕತ್ತಲೆ ಕವಿಯುವ ಮುನ್ನ ಎತ್ತ →

ಪೋಕುಮೆಂದರಿಯೆ ಹೇ, ಹರಿಯೆ !
ಭಯದಿಂ ತಳಮಳಿಸುತಿವೆ ತನುಮನ
ಪ್ರಾಣಗಳ್, ನೀನೀಗಳೆನ್ನ
ಸರಿದಾರಿಗೆ ನಡೆಸೈ ಪರಮ ಬಂಧು !
ಎನ್ನ ಮೊರೆಯಂ ಕೇಳ್ದು ಕರುಣೆ
ದೋರ್ದವೋಲ್, ಪೆಣ್ಣೊಂದು ಮರುಗಿದವೊಲ್
ಆವ ದೈವ ದಯೆ ದೋರ್ದುದೋ
ಆಕ್ಷಣಂ ಕಣ್ಗೆ ಬಿತ್ತೊಂದು ಕರಿಯ
ಉಡುಪು ತೊಟ್ಟವೊಲ್ ಕಪ್ಪನೆಯ
ಕಲ್ಪವೃಕ್ಷ ನೇರದ Hand post !
ಮನದಿ ಮಿಂಚಿತೆ ಆಸೆಯ ಬೆಳಕು
ಓಡುತಲ್ಲಿಗೆ ಕಂಡೆನಾ ಕೈಮರ !
ಕಣ್ಗೆಸೆದುದು ಅಕ್ಕರವೆನದ
ಐದಕ್ಕರದ ಬರೆಹವದರ ಮೋಗಡೆ,
"ಪರಮ ಪಥ" ಓವೊ, ಎನಿತಂದ !
ಇನ್ನೇಕೆ ಸಂಕೆ ಎನುತೆ ಪಿಡಿದೆನದು
ತೋರ್ದ ಮುಂಪಥ ಎರ್ದೆಗೆಡದೆ
ದಿಟ್ಟತನದಿಂ. ಮುಂದೆ ಸುದೂರದಲಿ
ಕಂಡಿತ್ತೈ ಮತ್ತೊಂದು ಕಪ್ಪು
ವರ್ಣದಿಂದೊಪ್ಪುವ Hand post !
ನಾನೋಡಲಾ ಕೈಮರವಂ
ಅಕ್ಕರವೆನದಕ್ಕರದಲಿ ಕಣ್ಣಿಗೆ
ಕಂಡಕ್ಕರ 'ಸ್ವರ್ಗಕೆ ದಾರಿ !'
ಅದ ನೋಡಿ ಆನಂದದಿಂದೋಡಿದೆ
ಅದು ತೋರಿದ ಪಥವಂ ಪಿಡಿದು !
ಹಾ ! ಎಂತಹ ನಲ್ ಗಂಪು ! ಕಂಪುಗುವ →

ಆ ಜಾಡು ಹಿಡಿದು ನಾ ನಡೆಯೆ
ಸೇರಿದೆನವಿತ ಮೊಲ್ಲೆ ಗಿಡಗಳಿರ್ದ
ಸುರಸುಂದರ ಬನಮಂ ! ಅಹಾ !
ಅರಳು ಮಲ್ಲಿಗೆ ಪೂಗಳ ಹೇರಾಶಿ !
ಕಂಪು. ಕಂಪು. ಕಂಪು. ಸುಗಂಪು !
ಆಘ್ರಾಣಿಸಿದೆ ತನುಮನ ತುಂಬುವೊಲ್ !
ಅಃ ! ಅರಗಳಿಗೆ ಉರುಳಿ ಮನಂ
ಆನಂದರಸಾನ್ನ ಉಣುವ ಮುನ್ನ
ಆನಲ್ಲಿ ಕರಗಿ ನೀರಾಗಿ ಮೊಲ್ಲೆಯಾಗಿ
ಅರಳಿದೆ ಮಂಗಳ ಮಾಯದಾಟದೊಲ್ ಕಣ !

— ೦ —

ಹಾಳು ಚಲನಚಿತ್ರ
ನೋಡಿ ನೋಡಿ ಮನವ
ಕೆಡಿಸದಿರು ನೀ ಮಗುವೆ !
ಮನವು ಕೆಟ್ಟರೆ ಬುದ್ಧಿ
ಕೆಡಗು ತಿಳಿದಿರು ಮಗುವೆ !

— ೦ —

ಲೋಕ ಪ್ರಜ್ಞೆ

ಲೋಕ ಪ್ರಜ್ಞೆ ತ್ರಿಲೋಕ
ಚಿಂತನ ಮಂಥನಗಳಿಗೆ
ತಾನಾದತ್ತು ಬಿತ್ತು.

ಲೋಕ ಪ್ರಜ್ಞೆ ಸುಜ್ಞಾನ
ವಿಜ್ಞಾನ ಪ್ರಜ್ಞಾನಗಳಿಗೆ
ತಾನಾದತ್ತು ಬಿತ್ತು.

ಲೋಕ ಪ್ರಜ್ಞೆ ನಯವಿನಯ
ಸದ್ಗುಣ ಸಂಪನ್ನತೆಗೆ
ತಾನಾದತ್ತು ಬಿತ್ತು.

ಲೋಕ ಪ್ರಜ್ಞೆ ಆಚಾರ
ವಿಚಾರ ವಿಹಾರಗಳಿಗೆ
ತಾನಾದತ್ತು ಬಿತ್ತು.

ಲೋಕ ಪ್ರಜ್ಞೆ ಆಧ್ಯಾತ್ಮ
ಪರಮಾತ್ಮ ಸಂವೃದ್ಧಿಗೆ
ತಾನಾದತ್ತು ಬಿತ್ತು.

— ० —

ಫ್ಯೂಜಿಯಾಮ

ಉದಯ ರವಿಯ ರಾಜ್ಯಂ ಎನುವೊಂದು ಸುಸುಂದರ
ಪೆಸರ್ವೆತ್ತಿಹ ಜಪಾನ್ ದೇಶೀಯ ಪ್ರದೇಶಂ
ಗಿರಿ, ಬೆಟ್ಟ, ಪರ್ವತಗಳ ಸುಂದರ ಹೊನ್ನಾಡು !
ಬೃಹತ್ತಮ ವಾಹಿನಿಗಳಪ್ಪ ಸಮುದ್ರ ನದಿ
ನದಗಳ ಥಳಥಳಿಸುವ ಜಲರಾಶಿ ! ಎಲ್ಲೆಡೆಯು
ಬಿಸಿನೀರಿನ ಬುಗ್ಗೆಗಳು ಮೇಣ್ ಜ್ವಾಲಾಮುಖಿ
ಪರ್ವತಗಳ ಅವತರಣಮೆ ಅವತರಣಂ ಕಣ್ !
ಲೋಕದಲಿ ಅಪೂರ್ವಮೆನಿಸಿಹ ಫ್ಯೂಜಿಯಾಮ
ಎಲ್ಲ ಜ್ವಾಲಾಮುಖಿಗಳ ತಾಯಿ ! ಒರ್ಮೆ ಪೆರ್
ಜ್ವಾಲಾಮುಖಿಯೈಸಿರ್ದು, ಕಾಲಾನುಕಾಲದಿಂ ತಾಂ
ವಿರಾಗಿಯೊಲ್ ಸುಶಾಂತ ಪ್ರಶಾಂತ ಮೋಹಿನೀ !
ರಾಷ್ಟ್ರೀಯ ಜನಮನ ಆಹ್ಲಾದಿನೀ ! ಹನ್ನೆರಡು
ಸಾವಿರದ ಮುನ್ನೂರೆಂಭತ್ತೆಂಟು ಅಡಿಗಳ
ಎತ್ತರಂ ಮುಟ್ಟಿ, ಗಗನಕೇರ್ವಡೆದು ಕಿಕ್ಕಿರಿ
ತುಂಬಿದರಿಲ್ ಚುಕ್ಕಿಗಳಂ ಮುದ್ದಿಸಿ ಮುಗಿಲಂ
ಮುಟ್ಟಿ ಮುಟ್ಟಿ ಸಾವರಿಸುವ ತಾಯಿ ಫ್ಯೂಜಿಯಾಮ !
ಶಂಖಾಕೃತಿಯ ಪರ್ವತೇಶ, ಬೃಹದ್ ಬೋಗುಣಿ
ಬಾಯಿಯುಂ ಪೋಲ್ವ ಮಹಾ ದ್ವಾರಮುಂ ತೆರೆದು
ನಿಂದಂ ಸಿರಿ ಭೀಮ ಭೀಷಣಂ !
ಆಮಮ ! ಏನಾ
ಪರ್ವತಾಗ್ರಂ ! ರುದ್ರರಮಣೀಯ ಕಠೋರಂ !
ಸಗ್ಗದಿಂದಿಳಿತಂದುದೊ ಎನಲ್ಕೆ ಪ್ರಕೃತಿಯ
ಸೌಂದರ್ಯದ, ಅದ್ಭುತ ನಲೆವೀಡು ಫ್ಯೂಜಿಯಾಮ ! →

ಶಿಖರದ್ದೇಶದ ಮಂಜಿನ ಮುಕುಟ ನೇಸರಿನ
ಹೊಂಗಿರಣಗಳ ಲೇಪನದಿಂ ಥಳಥಳಿಸುತಿರಲ್
ಅಹ, ನಯನ ಮನೋಹರ ಬಂಧುರಂ ! ಉಳಿದೆಲ್ಲ
ಜ್ವಾಲಾಮುಖಿಗಳ್ ರೋಷದಗ್ನಿಯಂ ಕಾರಿ
ಭುಗಿಲೇಳುತಿರೆ ಫ್ಯೂಜಿಯಾಮ ಶಾಂತ ಸುಂದರಂ !
ಬಣ್ಣನೆಗೆ ನಿಲುಕದ ಭವ್ಯ ಪರ್ವತದೇಶಂ
ಜಪಾನೀಯರ್ಗೆ. ದೈವ ಸಮಾನಂ ನಿತ್ಯ ಪರಿ
ಪೂಜಿತಂ ! ತನ್ನಡಿಯಲಿ ಮೂಜ್ವಾಲಾಮುಖಿಗಳ
ಬಳಗಂ ! ಶಿನ್‌ಫ್ಯೂಜಿ, ಕೋಫ್ಯೂಜಿ, ಕೋಮಿಟಾಕೆ
ಎಂದೆಂಬ ನಾಮಧೇಯಗಳಿಂ ಬಲ್ ಪ್ರಖ್ಯಾತಂ !
ಸಾವಿರದ ಏಳನೂರೇಳರಲಿ ಕಟ್ಟ ಕಡೆ
ಅಧ್ಯಾಯಮೆನೆ ರೋಷದಿಂ ಭುಗಿಲೆಳ್ದಗ್ನಿಯಂ
ಕಾರ್ದು ದೂರ ಟೋಕಿಯೋ ನಗರಮಂ ಭಸ್ಮ
ರಾಶಿಯಂ ಮುಚ್ಚಿ ಕಂಗೆಡಿಸಿದತ್ತು ಅಖಿಲ
ಜನ ಜಂಗುಳಿಯಂ. ಆ ಬಳಿಕವೊದವಿದ ದುಃಖ
ಸಂಕಟಮೊ ಎನಲ್ಕೆ ಫ್ಯೂಜಿಯಾಮ ಸುಶಾಂತಂ !
ಪ್ರಾತಃಸಮಯೆ ಥಳಥಳಿಸುತ ಬಾನೇರುವಾ !
ಬಾಲ ಬಾಸ್ಕರನ ಉಜ್ವಲೋಜ್ವಲ ಬಿಂಬದಲಿ
ಸ್ವರ್ಣಕಾಂತಿಯುಣ್ಮೆ ನದಿ, ಗಿರಿ, ಪರ್ವತಗಳ
ಮೇಲೆರಚಿ ರಯ್ಯಮೊಪ್ಪುವ ಸೊಬಗಿನೈಸಿರಿಯ
ರಸಸ್ವಾದನೆಯಿಂ ಜನಮನಂ ಧ್ಯಾನಲೀನಂ !
ಆ ಮಹಾ ಪರ್ವತಗಳ ಅಧಿದೇವತೆಯನ್ನೆ
"ಸೆಂಗನ್ ಸಾಮ" ಎಂಬ ಪೆಸರಿಂ ಪೂಜಿಪರೆಲ್ಲ
ದೈವತ್ವಕೇರ್ಪಡಿಸಿದೊಲ್ ಪರ್ವತೇಶನಂ.
ಓಂ ಮಮ ಪ್ರಿಯ ಬಂಧು ! ನೀನೋರ್ಮೆ ಸಂದರ್ಶಿಸಿ
ಬಾರೈ ! ಸ್ವರ್ಣ ಸ್ವರ್ಗದ್ವಾರವ ತಟ್ಟುವ ಮುನ್ನ !

— o —

ನಾವ್ ನಲಿ ನಲಿಯುುವಾ !

ಬಾ ಗೆಳತಿ ! ಬಾಬಾರೆ ಹೋಗುವಾ !
ದೂರ ಸೀಮೆಯ ಪಡುವಣ ನಾಡಿಗೆ
ಬದಿಗೊತ್ತಿ ಭವದ ಭಂಗ ಬನ್ನಂ
ಮನತುಂಬಿ ಆನಂದಭಾವವಂ.
ನಾವ್ ನಲಿ ನಲಿಯುುವಾ !

ಇಂದಿನ ಬೆಳಗುಂಬೊಳ್ತು ಸೊಂಪಿನ
ತಂಪಿನ ತನಿಯುಂಡು ತನುಮನವಂ
ಉಲ್ಲಸದ ಉಯ್ಯಾಲೆಯಲಿ ತೂಗುತೆ
ಮೈಮರೆಯೆ ಸಂತೋಷ ಭಾವದಿಂ.
ನಾವ್ ನಲಿ ನಲಿಯುುವಾ !

ಬನ ಬನದಲಿ ಅಲೆಯುವ ಪರಮೆಗಳ
ಝೇಂಕೃತಿಯ ನಾದಂ, ಕೊರಳ್ದನಿ
ಪರಿಸುತ ಚೆಲುವನು ಚೆಲ್ವ ಸುಂದರ
ಪಕ್ಷಿಗಳಂ ನೋಡುತೆ ಜಗವ ಮರೆತು,
ನಾವ್ ನಲಿ ನಲಿಯುುವಾ !

ಬಾಬಾರೆ ನೀರೇಜಮುಖಿ ! ಸಾಕು
ಈ ಭವದ ಗೋಳು ! ಮುಂಬಾಳೆಮ್ಮ
ಜಾಜ್ವಲ್ಯ ಮಪ್ಪಂತೆ ನೆಗಳ್ದೊಡೆ
ಶಾಂತಿ ತನಿಯಲಿ ಪೊಸಬಾಳ್ ಪೂಡಿ
ನಾವ್ ನಲಿ ನಲಿಯುುವಾ !

— ೦ —

ಕಪಿಲಾ ನದಿ

"ಬ್ರಹ್ಮಂ ಸತ್ಯಂ ಜಗತ್ ಸ್ಫೂರ್ತಿಃ"

ಕಾರ್ಗಲ್ಲುಗಳಿಂಡಿನುಡಿಯೊಳ್ ಹನಿಹನಿಯೈಸಿ
ಪೊದಲ್ದ ಹನಿಗಳ್ ಒಗ್ಗೂಡಿ ಝರಿಯೊಲ್ ಹರಿದು
ಜಲರಾಶಿ ಥಳಥಳಿಸಿ ಜುಳುಜುಳು ಪರಿಯುತಿಹುದು
ಕಗ್ಗಲ್ಲ ರಾಶಿಯಲಿ ಮುನ್ನುಗ್ಗಿ ಸಾಲಾಗಿ
ವೆಳ್ಳಿ ಝರಿಯೋಲ್ ಶೀಳು ಶೀಳಾಗಿ ! ಸಾಲ್ಗೈಸಿದ
ಏಳು ಶೀಳುಗಳ್ ಮುಂದೆ ಒಂದೊಂದಾಗಿ ಒಡ
ಗೂಡಿ ಪಿರಿದಪ್ಪಿ ಹರಿಯಿತ್ತೈ ಇಳಿದಾಣದಲಿ
ಕಪಿಲಾ ನದಿ ತಾನಾಗಿ ! ಶ್ಯೆಯ್ಯಾದ್ರಿ ಪದತಲ
ಸಂಭವೆ ! ಪವಿತ್ರ ಪುಣ್ಯಾವನಿ ! ನಮೋನ್ನಮಃ!
ಸಕಲ ಜೀವಕೋಟಿಗೆ ವರದಾನಗೈವವೋಲ್
ತಣ್ಪಿನ ತನಿಯುಣಿಸುವೆ ಮುದದಿಂ ಹೇ, ತಾಯೆ !
ನಿನ್ನೊಡಲ ಪಿಠಾರಿಯಲಿ ಎನಿತೆನಿತು ಬಗೆವಗೆಯ
ಸಸ್ಯಾಳಿ ಜೀವಾಳಿ ರತ್ನಾಳಿಗಳ ಮಹಾ
ಮಂಡಲಮೊ ಅದನಾರು ಬಲ್ಲರ್ ನಿಜ ಮಾತೃಕೆ !
"ಬ್ರಹ್ಮ ಸ್ಯತಂ ಜಗತ್ ಸ್ಫೂರ್ತಿಃ" ಎನಲ್ಕೆ ನಿನ್ನ
ಚಣಂ ತಂಗದ ಸಂಜೀವನಯಾತ್ರೆಯು ಜುಳುಜುಳು
ಮಂಜುಳರವ ಗಾನಲಹರಿಯನಾಲ್ಗೈಸುತಿರೆ
ಸ್ವರ್ಗ ಸುಧೆಯನುಂಡವೊಲ್ ಆನಂದಮಯಂ !
ವರುಣ ಕೃಪೆಯಿಂ ವರ್ಷಧಾರೆ ಹರಿಯೆ ನಿತ್ಯಂ
ರೋಷ ಭೀಷಣತೆಯಿಂದುಕ್ಕುಕ್ಕಿ ದಡಗಳಂ
ಕೊಚ್ಚಿ ಫೇನ ಪುಂಜವನೊಟ್ಟಿ ನೊರೆನೊರೆಯಾಗಿ →

ಬಂಡೆಬಂಡೆಗಳಂ ನೆರೆ ಪಾಯ್ದು ರಭಸದಿ ಪರಿ
ದೋಡುವೆ ಮಹಾ ಸಾಗರ ಸಂಗಮುವಂ ಬಯಸಿ.
ಆರಾರ ಪ್ರಶಾಸನಮಂ ಮನಗೊಳದೆ ದೇವ
ಯಾನೆಯೆನೆ ಮುನ್ನುಗ್ಗುತಿಹೆ ಪಾದರಸದವೊಲ್ !
ತೀರ ಪ್ರದೇಶ ಪರಿಪೋಷಿಣಿ ಪರಮುದಯಾ
ಶೀಲೆ ! ನಂಜುಂಡೇಶ್ವರನ ಹೃದಯ ಮೋದಿನಿ !
ತವರಸ ಕರುಣರಸಪಾನದಿಂ ತಣ್ಪಿನ ತನಿಯಲಿ
ಪಚ್ಚ ಪಸುರಪ್ಪಿದ ವಿವಿಧ ಸಸ್ಯರಾಜಿಯಲಿ
ಸುಮ ಸಮುಚ್ಚಯಗಳ ಮಹಾ ವೈಭವೀಕರಣಂ !
ನಂದನವನಕೆ ಹೆಗಲೊಣೆಯೊ ಎನಲ್ ಸುಂದರಮಾ
ಭೂನಂದನವನ. ಎನೆ ಉತ್ಪ್ರೇಕ್ಷೆಯಲ್ತು ; ವರ
ಪುಷ್ಪಾಳಿ ಎಲ್ಲಿರ್ದೊಡಂ ನಂದನವನಮೆ ಕಣ್ !
ಮೊಲ್ಲೆ ಬನದಲಿ ದಳಬಿರಿದರಳಿದ ಮಲ್ಲಿಕಾ
ಸುಮವೇಶಿನಿಯ ನಮ್ರ ನಮನ ತವಪದ ತಲಕೆ

— ೦ —

ಮನ ಮಥಿಸಿ ಯೋಚಿಸು
    ತಿಳಿವು ಮೂಡುವನ್ನ.
ಮೈ ಮುರಿದು ದುಡಿ
    ಬೆವರು ಹರಿವನ್ನ.

— ೦ —

ಕಾರವಾರ

ತೆಂಗು ಕೌಂಗುಗಳ ಹಸುರಂಚಿನಲಿ
ಗಂಭೀರ ಸೌಂದರ್ಯ ರಾಶಿಯಂ
ಬಿಂಬಿಸುವ ಮಹೋನ್ನತ ಚಿತ್ತಾರ !
ಕಾರವಾರ ರಮ್ಯ ಕಡಲ ತೀರ !

ದಂಡು ದಂಡೈಸಿ ಭೋರ್ ಭೋರನೆ
ಭೋರ್ಗರೆದು ಮುನ್ನುಗ್ಗಿ ಮೇಲಾಯ್ದು
ಬಹ ಮಹಾ ಅಲೆಗಳೋಳಿಯ ಚಿತ್ರ !
ಕಾರವಾರ ಭವ್ಯ ಕಡಲ ತೀರ !

ನೋಳ್ಪ ಕಂಗಳಿನಿತು ದಣಿಯದವೋಲ್
ಸ್ವರ್ಗ ಸೌಂದರ್ಯವಂ ಪ್ರತಿನಿಧಿಪ
ಮಹೋನ್ನತವಾ ನೈಭವೀಕರಣ !
ಕಾರವಾರ ದಿವ್ಯ ಕಡಲ ತೀರ !

ಸೂರ್ಯರಶ್ಮಿಯ ಕನಕ ಕಾಂತಿಯುಂ
ಮುದ್ರೆಯೊತ್ತಿ ಥಳಥಳಿಸುತಿರಲಾ
ಜಲರಾಶಿಯ ಶೈಲಿ ಮನಮೋಹಕಂ !
ಕಾರವಾರ ಮಹಾ ಕಡಲ ತೀರ !

ಕಡಲಂಚಿನ ಸೈಕತಶಯ್ಯೆಯಂಚಿನಲಿ
ತಣಕ್ ಪಣಕೆನುತ ಮಿಂಚು ಮೈಯಲಿ
ಚಿಮ್ಮುತ ನಲಿವ ಮತ್ಸ್ಯಗಳ ರಾಶಿ !
ಕಾರವಾರ ರಮ್ಯ ಕಡಲ ತೀರ !

→

ಕರ್ರ್ರ್ಮೈಯಿನ ಹೆಬ್ಬಂಡೆಗಳ ನೋಡ !
ಪೇರಾನೆಗಳ ದಂಡು ಮುದ್ದಿನಿಂ
ಮೈಗೆ ಮೈ ಹಚ್ಚಿ ಮಲಗಿದುವೊ ಎನೆ
      ಕಾರವಾರ ರಮ್ಯ ಕಡಲ ತೀರ !

ಘನ ಘೋರ ಘರ್ಜನೆಯ ಭಯಂಕರ
ಜಲರಾಶಿಯಲಿ ಸರಸವಾಡುತಿಹ
ಮಿಂಚು ಮೈ ಮೀಂಚುಳ್ಳಿಗಳ ನೋಡ !
      ಕಾರವಾರ ದಿವ್ಯ ಕಡಲ ತೀರ !

ಮತ್ತದೋ ತಿಮಿಂಗಿಲಗಳ ದಂಡು !
ಹಡಗುಗಳ ಬುಡಮೇಲೆಗೈದಪುವೋ
ಎನಲ್ ಸುತ್ತುವರಿವುದ ನೋಡಿರೈ !
      ಕಾರವಾರ ಭವ್ಯ ಕಡಲ ತೀರ !

ಪ್ರಾಚಾರ್ಯರಪ್ಪ ರವೀಂದ್ರನಾಥ
ಟಾಗೋರ್ ಅಲ್ಲಿಗೈದು ಪ್ರಕೃತಿಯ
ಆರಾಧನೆಗೈದರೆನೆ ಯೋಚಿಸಿರೈ
      ಕಾರವಾರ ಮಹಾ ಕಡಲ ತೀರ !

— ೦ —

ಏನೇ ಕೂಡಿ ಬರಲಿ ಇಂದು
   ಮರೆಯದಿರು ದೇವರನೆಂದೂ

— ೦ —

ಕಾಮ ಕಾಮನೆಗಳ
ಪಿಪಾಸಿಗಳ್

ಗರಿ ಬಲಿತ ಮರಿ ಹಕ್ಕಿ ಹಾರಾಡಿ
ಎರೆಂಕೆಯಂ ಪಟಪಟಿಸಿ ನಿಚ್ಚ
ನಲಿಯುತ ಸ್ವಚ್ಛಂದ ಭಾವದಿಂ
ಭವಿಷ್ಯದ ಸುಜೀವನದಾಸೆ ಬಲಿತು.

ಹಕ್ಕಿ ಹಾಡಿ ಪಾಡಿ ಹಲವು ಕನಸು
ಗಳ ಕೋದು ನೇರೀಳೆ ಕಿತ್ತೀಳೆ
ಹಲಸು ಮಾವುಗಳ ರುಚಿ ನೋನೋಡಿ
ಆನಂದದಿಂ ಭಾವಿಸುತ ಜಗವ.

ರಾಗಾನುರಾಗದಿಂದ ಉಲಿಯಿತು
ಕೊರಳ್ದುಂಬಿ ದೇವದೇವನ ನೆನೆದು ;
ಭಂಗಮಿನಿತು ಕಾಣದೆ ಮುದದಿಂದ
ಹಾರಾಡಿತು ಬಾಂದಳದಗಲಗಲ.

ಹೆಣ್ಣು ಹಕ್ಕಿ ರೆಕ್ಕೆ ಬಲಿಯೆ ಸುತ್ತ
ಮುತ್ತ ಮುತ್ತಿಬಹ ಎಣೆವಕ್ಕಿಗಳ
ಒಲವಿಗೇಂ ಕೊರಂ ? ಬಂದುವೈ ನೆರೆ
ಸರಸದಿಂ ಬನವಕ್ಕಿಯಂ ಒಲಿಸೆ !

ಮುಗ್ಧ ತೇನೆವಕ್ಕಿಯು ಪ್ರೇಮದಿಂ
ನೇಮದಿಂ ಹೋಹೆ ಪ್ರಿಯಕರನಂ
ನೆರೆನಂಬಿ ಕಂಡಿತೇಂ ಎಂದಿನೊಲ್
ಜೀವನೀ ಸ್ವಾತಂತ್ರ್ಯ ಮೋದಮಂ ?

ಬಾಳು ಬದುಕು ಮುಳ್ಳಿನ ಪಂಕದೊಲ್
ಚುಚ್ಚು ಮುದ್ದಿನುಂಬಳಿ! ಜಗವೆಲ್ಲ
ನೋಡುತಿರೆ ಮುಗ್ಧ ಸತಿಯು ಪಾಡು
ನೋವರಿಲ್ಲ ಕಾವರಿಲ್ಲ ಶಿವನೇ !

ಲೋಕ ಶ್ರದ್ಧೆ ಆತ್ಮವಿಕಾಸದೊಳ್
ಇರ್ಪುದೇಂ ? ಬಲಿದಿರಲ್ ಜೀವನೀ
ಲಾಳಸೆ ಕಮನೀಯ ಕಾಮನೆಯಲಿ
ಮಡದಿಯರ ಪರಿಪಾಡು ನೀನೋಡ ;

ದುಃಖ ಸಂಕಟ ನಿತ್ಯನೂತನ
ಶೈಲಿಯಲಿ ಬಸಿದು ತಿನ್ನುತ್ತಲಿವೆ
ತೋಳಗಳ ಮೊಳ್ಕೆಯಲಿ ; ಕಾಮದಿಂ
ಪ್ರೇಮದಿಂ ನೆತ್ತರಿನ ನೋಂಪಿಯಿಂ

ಹಲವು ಹತ್ತು ಬಗೆಯಲಿ ನೈದಳೆದ
ಕಾಮಕಾಮನೆಗಳ ಪಿಪಾಸಿಗಳ್
ನಿರ್ದಯದಿ ರೋಮರೋಮವಂ ಹಿರಿದು
ಬಾಧಿಸುವ ಪಾಡು ನೋಡು ಶಿವನೇ !

In life man is king of kings.

— o —

ಬಡವ ಬಲ್ಲಿದರ
ಭೇದವೆಣಿಸಬೇಡ.
ಒಳ್ಳಿತು ಕೆಟ್ಟದರ
ಆಯ್ಕೆ ತಪ್ಪಿಸಬೇಡ.

— o —

ಮಹಾ ಮಂದರ ಪರ್ವತ

ಕಾರ್ಗಲ್ಲುಗಳಿಂಡಿನ ಬೆಟ್ಟ ಪ್ರದೇಶ ತಾಂ
ದಿನದಿನಂ ಮುಂಬೆಳೆಯುತಿಹುದೊ ಎನೆ ಅಂಬರಂ
ಚುಂಬಿಸುವೊಲ್ ಜಗದ್ಭವ್ಯ ಪರ್ವತರಾಜ !
ಸುತ್ತಮುತ್ತಲ್ ಎತ್ತೆತ್ತಲುಂ ದಂಡೈಸಿ
ಮೇಘ ಮಾಲೆಗಳ್ ಮುತ್ತಿಬರೆ ಪುಣ್ಯಪುಂಜವೆ
ಮೈಗೊಂಡವೊಲ್ ನೋಳ್ಪ ಕಣ್ ರಸತುಷ್ಟಿಯಿಂ
ಸಂಭ್ರಾಂತಂ ! ಪೂರ್ವೀ ದಿಗಂತದಿ ಅರುಣಾರುಣ
ಸ್ವರ್ಣದುಂಡೆಯೊಲ್ ಮೂಡಿ ಜಗಜಗಿಸಿ ಒಯ್ಯನೆ
ಮೇಲೇರುತಿರೆ ಮಂದಿರ ಪರ್ವತ ಶಿಖರಮಂ
ಅಲಂಕರಿಪ ಮಾಳ್ಕೆಯಲಿ ನೋಳ್ಪ ಕಣ್ ಮಮ್ಮಲಂ !
ಮೈಯ ಪಚ್ಚವಾರ್ಧಿಯಲಿ ರಂಗು ರಂಗಿನಿಂ
ಅರಳಿ ತಂಗಾಳಿಯಾಟದಿಂ ಅತ್ತಿತ್ತ ತಲೆ
ದೂಗಿ ನಲಿವ ಸುಗಂಧ ಗಂಧಿತ ವರ ಪುಷ್ಪಾಳಿ !
ಮೈಯ ಸೊಂಪಿಗೆ–ಅತ್ಯದ್ಭುತ ಗಾತ್ರದ ಪೆರ್ಮೆಗೆ
ಸಮೀರನ ಚಾಮರ ಸೇವೆಗೆ ವಿನಮ್ರತೆಯಿಂ
ಸ್ಪಂಧಿಸುವ ಮಂದಿರ ಗಿರೀಶನೆ ನಿನಗೆ ನಮನ ;

ಶ್ರೀಕೃಷ್ಣ ಪರಮಾತ್ಮ ನಿನ್ನನೊಂದೆವೆರಳಲಿ
ಪಿಡಿದೆತ್ತಿ ತನ್ನ ಪರಿವಾರಮಂ ಅಡಗಿಸಿ ಬಿರು
ಗಾಳಿ ಜಡಿಮಳೆಗಳಿಂ ಸಂರಕ್ಷಿಸಿದೆನೆಂದೆನೆ
ಏಂ ಘನ ಗೌರವವೊ ನಿನಗೆ ಹೇ ಮಂದರಗಿರಿಯೇ !
ಶ್ರೀ ಕೃಷ್ಣ ಬಳಗಂ ನಲಿನಲಿಯುತಿರೆ ನಿನ್ನೊಳ್
ಬೀಡು ಬಿಟ್ಟು ಏನಾನಂದಮೋದವೊ ನಿನಗೆ !
ಮೇರ್ಣ್ ಸಸ್ಯರಾಜಿಯಲಿ ಅರಳ್ದ ಪುಷ್ಪಕೋಟಿಗೆ!
ಮತ್ತಂ ಮೃಗ ಪಕ್ಷಿ ಮುಂತಪ್ಪ ಜೀವಾಳಿಗೆ ! →

ಓ ಮಂದರ ಗಿರಿಯೇ ನಿನ್ನ ಭವ್ಯ ಶರೀರ
ಸಂಪತ್ತಿಗೊಲಿದು ನಲಿದಾಡಿದ ಶ್ರೀಕೃಷ್ಣನ
ಬಾಲ ಲೀಲೆಗಳಿಂದೆಸಿತಾನಂದಪಟ್ಟಿಯೊ !
ನಿನ್ನ ಪುಣ್ಯವೆ ಪುಣ್ಯ ; ಜನ್ಮಯೋಗವೆ ಯೋಗ !
ನಿನ್ನ ಪುಣ್ಯನಾಮ ಚಿರ ಭಾರತದಿತಿಹಾಸದಲಿ !
ಕವಿ ಮನದ ರಸಾವಿಷ್ಟ ಭಾವದಲಿ ನಮಿಪೆನ್
ಮನದುಂಬಿ ಪರಮ ಗೌರವದಾನಂದ ಸುಧೆಯಿಂ.

— ೦ —

ಜಾತಸ್ಯ ಮರಣಂ ಧ್ರುವಂ

ಹುಟ್ಟಿನ ಬೆನ್ನ ಹಿಂದೆಯೇ
ಹಿಂಬಾಲಿಸುತ್ತಿರುತ್ತದೆ
ಸಾವಿನ ನಿಗೂಢ ಛಾಯೆ.
ಕೊನೆಯ ಗಳಿಗೆ ಒದಗಿದೊಡನೆಯೇ
ಅಂಕೆ ಸಂಕೆಯಿಲ್ಲದೆ
ಸೆಳೆವುದದು ಪ್ರಾಣವಂ.

— ೦ —

ಚಂಪಕ ರಾಜಿ

ಓವೋ ! ಪಚ್ಚೆ ಪಸುರೊಸರುವ ವನದಿಯೊಳ್ ನಿಂದು
ತನ್ಗೆಣೆಯರೊಡಂ ಸ್ಪರ್ಧೆಗೆತ್ತುದೊ ಎನಲ್
ತೆಳ್ಮಯ್ಯೊಡೆದ ಚಂಪಕ ದ್ರುಮಂ ಏರು
ತೇರುತೇರಿ ಅಂಬರದೆತ್ತರಂ ಮುಗಿಲ್
ಮುದ್ದಿಸುವೊಲ್ ನಿತ್ಯಂ ಸತ್ಯಂ ಸುಂದರಂ !
ಪಲ್ಲವ ಪಾಣಿಗಳಲಿ ಮಿಡಿ ಮೊಗ್ಗುಗಳ ನೆರೆ
ತುಂಬಿ, ಅರೆವಿರಿದ ಮೇಣ್ ಅರಳಿಹ ಪುಷ್ಪ
ರಾಜಿ ಘಮಘಮಿಸೆ ಸಗ್ಗದ ಸಗ್ಗಿಗರಂ
ಮೀರಿಸುವೊಲ್ ನೋಡಾ ದ್ರುಮದ ಸಂಭ್ರಮಂ !
ಸುಯ್ಗಾಳಿ ಸುಯ್‌ಸುಯ್ಯನೆ ಸುಯ್ಯುತ ಬರಲ್
ಅತ್ತಿತ್ತ ತೂಗಾಡಿ ದಳಬಿರಿದು ಅರಳಿ
ರವಿಕಿರಣ ಪ್ರತಿಫಲಿಪ ಪುಷ್ಪ ದಳಗಳ
ಸುರ ಮಧುರ ಸೌಂದರ್ಯವಂ ನೆನೆ ಮನವೇ !

ಮೇದಿನಿಯೊಳ್ ಎಲ್ಲರಿಗೂ ಪ್ರಿಯವಲ್ತೆ
ಹೊನ್ನ ವರ್ಣದ ಸುಂದರ ಚಂಪಕ ರಾಜಿ ;
ಗುಡಿಯಲಿ ಶಿವನ ಮುಡಿಯನಲಂಕರಿಸುವೊಡೆ
ನೀನೆನಿತು ಪುಣ್ಯವತಿಯೊ ಚಂಪಕವೇಶಿ ;
ಒಂದೇ ದಿನಮಾನದಾ ಆಯುಷ್ಯದಲ್ಲಿ
ಎನಿತೊಂದು ಕೀರ್ತಿ ಪುಟ್ಟ ಆಕಾರಕ್ಕೆ !
ಮಧುಮತ್ತ ಭ್ರಮರಂಗಳಂ ನೀ ಕರೆದು
ಮಕರಂದವಂ ಉಣಿಸಿ ಬೀಳ್ಕೊಡುವೆ !
ಚಂಪಕ ಸುಮವೆನೆ ಪುಟ್ಟೆ ನೀಂ ಧನ್ಯೆ ಕಣ
ಮಲ್ಲಿಕಾ ರಸಮತಿಯಲಿ ಕಾವ್ಯಧಾರೆ ಹರಿಸುವವೋಲ್ !

— ೦ —

ಮಲ್ಲಿಕಾ ಕೃತಿಗಳು

(ಕವಿತಾ ಸಂಕಲನ)

೨೮) ವಿಜಯ ಗಾಥಾ
೨೯) ಗಾನ ತೀರ್ಥ
೩೦) ನಾದ ಬಿಂದು
೩೧) ಕಾವ್ಯಾನಂದ ನಂದಿನಿ
೩೨) ಭಾವಾನಂದ ನಂದಿನಿ
೩೩) ಸಂಗೀತ ಪುಷ್ಪಾಂಜಲಿ
೩೪) ಆತ್ಮ ಗೀತಾಂಜಲಿ

(ಸಂಜೀವನ ಕಾವ್ಯ)

೩೫) ಮಂಗಳ ಭಾರತಿ
೩೬) ಕಲ್ಯಾಣ ಭಾರತಿ
೩೭) ಉತ್ತರೋತ್ತರಣಿ
೩೮) ರಾಗಾನುರಾಗಿಣಿ
೩೯) ಪ್ರಫುಲ್ಲ ಭಾರತ

(ಪೌರಾಣಿಕ ನಾಟಕ)

೪೦) ಪುಣ್ಯಪಯೋನಿಧಿ
೪೧) ಪುಣ್ಯಾಭಿಸಾರ

(ಸಾನೆಟ್‌ಗಳು)

೪೨) ತರಂಗಿಣಿ

(ಗದ್ಯ ಕಾವ್ಯ)

೪೩) ಐಂದ್ರ ಕೀರ್ತಿ ಕೇತನಂ

(ಉಪನಿಷತ್ಕಥಾ)

೪೪) ಕೃತಂ ಸ್ಮರ ಕ್ರತುಂ ಸ್ಮರ

(ಶಿಶು ಸಾಹಿತ್ಯ)

೪೫) ದೂರ ದೇಶದಲ್ಲಿ
೪೬) ಬೆಳದಿಂಗಳ ರಾತ್ರಿ
೪೭) ರಂಗನ ಸಾಹಸ
೪೮) ಓಹಿಯೋಜ ಸರೋವರ
೪೯) ಕೌಶಿಕನ ಗೊಂಬೆ
೫೦) ವಿಶೇಷ ಸುದ್ದಿ
೫೧) ಕಲ್ಯಾಣಿ ರಾಗಿಣಿ

ಲಕ್ಷ್ಮೀ ಪ್ರಕಾಶನ
170, ಲ್ಯಾಂಗ್ ಫೋರ್ಡ್ ರೋಡ್, ಬೆಂಗಳೂರು–560 025